ಅಚಲ

ತಿಂಗಳ ಪತ್ರಿಕೆ

ಆಗಸ್ಟ್ 2002

- ಮೂರು ಹೆಜ್ಜೆ ಮುಂದೆ, ಎರಡು ಹೆಜ್ಜೆ ಹಿಂದೆ
  - ನೂಪುರ್ ಬಸು
  ಅನು - ಸಂಪಿಗೆ ಪುಷ್ಪ

- ಗುಪ್ತಾಂಗದ ಸ್ವಗತಗಳು
  - ನೇಮಿಚಂದ್ರ

- ಹೋರಾಟದಲ್ಲಿ ಮಹಿಳೆ
  - ಹೇಮಲತಾ ಮಹಿಷಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 17 ಸಂಚಿಕೆ : 8

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು.

ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on
behalf of Jagruthi Mahila
Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಕಳೆದ 17 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ., ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ

ವಾರ್ಷಿಕ ಚಂದಾ - ರೂ. 40/- (ವ್ಯಕ್ತಿಗಳಿಗೆ)

ರೂ. 75/- (ಸಂಸ್ಥೆಗಳಿಗೆ)

ಅಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)

ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಮೌಢ್ಯದ ಜ್ವಾಲೆಗೆ ಮತ್ತೊಂದು ಸತಿ

ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಟ್ಟ ಭಾರತ ಮತ್ತೊಮ್ಮೆ ಅನಾಗರೀಕ ಅಚರಣೆಗೆ ಸಾಕ್ಷಿಯಾಗಿದೆ. ಶ್ರೇಷ್ಠ ವಿಜ್ಞಾನಿಯೊಬ್ಬರನ್ನು ರಾಷ್ಟ್ರದ ಅಧ್ಯಕ್ಷರನ್ನಾಗಿ ಹೊಂದಿರುವ ಸಂದರ್ಭದಲ್ಲೇ ಸತಿಯೆಂಬ ಮೌಢ್ಯ ಮತ್ತು ಅಮಾನುಷ ಸಂಪ್ರದಾಯವು ಮತ್ತೊಮ್ಮೆ ತಲೆ ಎತ್ತಿದೆ. ಮಧ್ಯಪ್ರದೇಶದ ಪನ್ನಾ ಜಿಲ್ಲೆಯ ತಮೋಲಿ ಗ್ರಾಮದಲ್ಲಿ ಅರವತ್ತರ ವೃದ್ಧೆ ಕುಟ್ಟು ಬಾಯಿಯು ಇದೇ ಆಗಸ್ಟ್‌ನಲ್ಲಿ ಸತಿಯೆಂಬ ಹತ್ಯೆಗೊಳಗಾದದ್ದು ಇಂದು ಪ್ರಜ್ಞಾವಂತರನ್ನೆಲ್ಲಾ ರೊಚ್ಚಿಗೆಬ್ಬಿಸುತ್ತದೆ. ಅಷ್ಟೇ ಅಲ್ಲ, ಈ ದೇಶವು ಕಂಪ್ಯೂಟರೀಕರಣ, ಬಾಹ್ಯಾಕಾಶ ಸಂಶೋಧನೆ ಮುಂತಾದ ಹತ್ತು ಹಲವು ಸಾಧನೆಯ ಪದಕಗಳನ್ನು ಎಷ್ಟೇ ಹೆಗಲಿಗೇರಿಸಿಂಕೊಂಡರೂ ಅದು ಕೇವಲ ಬೆರಳಣಿಕೆಯ, ಮೇಲ್ಪದರದ ಪ್ರಗತಿಯ ಸೂಚಕವಾಗುತ್ತದೆಯೇ ಹೊರತು ಅಭಿವೃದ್ಧಿಯ ಮಾನದಂಡವಾಗುವುದಿಲ್ಲ.

ಹದಿನೈದು ವರ್ಷಗಳ ಹಿಂದೆ ರಾಜಸ್ಥಾನದ ರೂಪಕನ್ವರಳ ಸತಿ ಪ್ರಕರಣ ನಡೆದಾಗಲೇ ಪ್ರಕಟಗೊಂಡ ಪ್ರತಿಭಟನೆ, ಸಾಮೂಹಿಕ ಜಾಗೃತಿ ಮತ್ತು ಈ ಚಟುವಟಿಕೆಗಳು ಹೇರಿದ ಒತ್ತಡದಿಂದ ಸರ್ಕಾರ ತೆಗೆದುಕೊಂಡ ಕ್ರಮಗಳು ಈ ದೇಶದಲ್ಲಿ ಬದಲಾವಣೆಯ ಬಿರುಗಾಳಿಯನ್ನು ಬೀಸಬೇಕಾಗಿತ್ತು. ಆದರೆ ವಸ್ತುಸ್ಥಿತಿ ಹಾಗಾಗಲಿಲ್ಲ. ಜಾಗತೀಕರಣದ ಹೆಸರಿನಲ್ಲಿ ಆರ್ಥಿಕ ಚಟುವಟಿಕೆಗಳು ಬಿರುಸಿನಿಂದ ಸಾಗಿದಂತೆ ಕಂಡರೂ ಕಂದಾಚಾರ, ಮೂಢನಂಬಿಕೆಗಳು ಶಾಸ್ತ್ರ ಸಂಪ್ರದಾಯಗಳು ಪುನರ್ ಜನ್ಮ ತಾಳುತ್ತಿವೆ. ವಿದ್ಯಾಭ್ಯಾಸ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೆಚ್ಚುತ್ತಿರುವ ಕೇಸರೀಕರಣ ವೈಜ್ಞಾನಿಕ ತಿಳುವಳಿಕೆಗೆ ಮಾರಕವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇತ್ತೀಚಿನ ಮಧ್ಯಪ್ರದೇಶದ ಸತಿ ಪ್ರಕರಣವನ್ನು ಅವಲೋಕಿಸಿದಾಗ ಕೆಲವೊಂದು ಕುತೂಹಲಕರ ಸಂಗತಿಗಳು ಹೊರಬೀಳುತ್ತದೆ.

ಇಲ್ಲಿ ಸತಿಯಾದ ಕುಟ್ಟುಬಾಯಿ ಅರವತ್ತರ ವೃದ್ಧೆ. ಕಳೆದೆರಡು ದಶಕಗಳಿಂದ ಪತಿಯೊಡನೆ ವಾಸಿಸದೆ ಕಿರಿಯ ಮಗನೊಂದಿಗೆ ವಾಸಿಸುತ್ತಿದ್ದವಳು. ಇಂತಹ ವೃದ್ಧೆಗೆ ಪತಿಯ ಮರಣಾನಂತರ ಇದ್ದಕ್ಕಿದ್ದಂತೆ ಬದುಕು ಭಾರವಾಗಿ, ಅಸಹನೀಯವಾಗಿ ಬದುಕು ಕೊನೆಗಾಣಿಸಿಕೊಳ್ಳ ಬೇಕೆಂಬ ಆತುರ ಹುಟ್ಟಿತೇ? ಅಥವಾ ಪತಿಯ ಬಗ್ಗೆ ಪ್ರೀತಿಯ ಮಹಾಪೂರ ಉಕ್ಕಿ ಹರಿಯಿತೆ? ಇಲ್ಲವೇ ಸತಿಯಾಗಿ ಮನೆತನದ ಅಂತಸ್ತು ಹೆಚ್ಚಿಸಿ ಹಳ್ಳಿಯ ಸಂಪತ್ತು ಕಾಯಬೇಕೆಂಬ ಮಹದಾಸೆ ಹುಟ್ಟಿತೆ. ಈ ಸಂದರ್ಭದಲ್ಲಿ ಇವು ಯಾವುವೂ ಕುಟ್ಟುಬಾಯಿಯ ಸತಿಗೆ ಕಾರಣವಾಗಿಲ್ಲವೆಂಬುದು ಮೇಲ್ನೋಟಕ್ಕೇ ಎದ್ದು ಕಾಣುತ್ತದೆ. ಕುಟುಂಬದವರ ದುರಾಸೆ, ಗ್ರಾಮದ ಜನತೆಯ ಮಹಾಮೌಢ್ಯ ಈ ಕೃತ್ಯದ ಬೆನ್ನಿಗಿದೆ. ಮೊಟ್ಟ ಮೊದಲಿಗೆ ರಾಜ್ಯಸರ್ಕಾರ ಒಂದು ಆರೋಗ್ಯಪೂರ್ಣ ನಿಲುವನ್ನು ತೆಗೆದುಕೊಂಡಿದ್ದು ಮೆಚ್ಚುಗೆಯ ಅಂಶವಾಗಿದೆ. ಆದರೆ ಪೋಲೀಸ್‌ರಿಗೆ ಸಹಕರಿಸದ ಹಳ್ಳಿಯವರು ಈ ಸಂದರ್ಭದಲ್ಲಿ ಮಹಾಪರಾಧಿಗಳಾಗಿದ್ದಾರೆ. ಅಷ್ಟೇ ಅಲ್ಲ ಈ ಸಂದರ್ಭದಲ್ಲಿ ಅಲ್ಲಿನ ಗ್ರಾಮೀಣ ಜನತೆ ತೋರಿಸಿರುವ ಮೂಢನಂಬಿಕೆಯು ಆತಂಕ ಹುಟ್ಟಿಸುವಂತಹುದು. ಸತಿ ಯ ಆಚರಣೆಯು ಶಿಕ್ಷಾರ್ಹ ಅಪರಾಧವೆಂಬುದನ್ನು ತಿಳಿಯದ ಜನತೆಯ ಮೌಢ್ಯತೆಯನ್ನು ಕಾಯ್ದುಕೊಂಡ ರಾಜಕಾರಣಿಗಳೂ ಕೂಡ ಅಪರಾಧಿಗಳೇ.

ಸತಿಯಿರಲಿ, ಇಂತಹ ಯಾವುದೇ ಘಟನೆಯಿರಲಿ, ಸಂಭವಿಸಿದಾಗ ಅದರ ಉಚ್ಚಾಟನೆ ಮತ್ತು ನಿರ್ಮೂಲನೆ ಎಲ್ಲ ರಾಜಕೀಯ ಪಕ್ಷಗಳ ಮತ್ತು ಸಮುದಾಯನ ವಿವಿಧ ಭಾಗಗಳ ಮುಖ್ಯ ಕರ್ತವ್ಯವಾಗಬೇಕು ಬದಲಿಗೆ ಇಂತಹ ಘಟನೆಗಳನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಪ್ರವೃತ್ತಿ ಹೋಗಬೇಕು. ಈ ಬಾರಿಯ ಸತಿ ನಡೆದಾಗ ಅದನ್ನು ಖಂಡಿಸಿ ವಿರೋಧಿಸಿ ಭಾರತೀಯ ಜನತಾ ಪಕ್ಷದ ಧುರೀಣರು ಹಿಂದೆ ರೂಪಕನ್ವರಳ ಸತಿಯಾದಕ್ಕೆ ಏನು ಮಾಡಿದರೆಂಬುದು ಚರಿತ್ರೆಯಲ್ಲಿ ದಾಖಲಾಗಿದೆ. ಹಿಂದೆ ರಾಜಾರೋಷವಾಗಿ ನಡೆದ ರೂಪಕನ್ವರಳ ಸತಿಯ ಘಟನೆಯನ್ನು ತಡೆಯದಿದ್ದೇ ಅಲ್ಲದೆ ಆಗ ನಡೆದ ವೈಭವೀಕರಣದ ಚುನರಿ ಮಹೋತ್ಸವದಲ್ಲಿ ಆ ರಾಜ್ಯದ ಶಾಸಕರು, ಪಕ್ಷದ ಧುರೀಣರು ಭಾಗವಹಿಸಿದ್ದುದನ್ನು ಯಾರೂ ಮರೆಯಲು ಸಾಧ್ಯ.

ಸತಿಯಾದವಳು ನನ್ನದೇ ಸಮ್ಮತಿಯಿಂದ ಸತಿ ಹೋದರೆ, ಅಂತಹ ಆಚರಣೆಗೆ ಶಾಸ್ತ್ರಗ್ರಂಥಗಳ, ಧರ್ಮಶಾಸ್ತ್ರಕಾರರ ಒಪ್ಪಿಗೆಯಿದೆಯೆಂದು ಹೇಳಿ ಕಂಚಿ ಸ್ವಾಮಿಗಳು ಈ ಹಿಂದೆಯೇ ಅಪ್ಪಣೆ ಕೊಡಿಸಿದ್ದರು ಆದರೆ ಇಂದು ಸತಿ ನಿಷೇಧ ಕಾನೂನಿನನ್ವಯ ಸತಿ ಹೋಗುವುದಾಗಲಿ ಅಂತಹ ಕೃತ್ಯಕ್ಕೆ ಬೇರೆಯವರನ್ನು ಪ್ರೇರೇಪಿಸುವುದಾಗಲಿ, ಕೊನೆಗೆ ಅದನ್ನು ವೈಭವೀಕರಿಸಿ ಆಚರಿಸುವುದಾಗಲೀ ಎಲ್ಲವೂ ಶಿಕ್ಷಾರ್ಹ ಅಪರಾಧಗಳೇ. ಆದರೆ ಇಂತಹ ಕಟ್ಟುನಿಟ್ಟಿನ ಶಾಸನವಿದ್ದಾಗ್ಯೂ, ಈಗಲೂ ವೈಚಾರಿಕ ಸ್ವಾತಂತ್ರ್ಯದ ಹೆಸರಿನಲ್ಲಿ ತಾವಾಗಿ ಬಯಸಿ ಸತಿಹೋದರೆ ತಪ್ಪೇನಿದೆ. ಎನ್ನುವ ವಿತಂಡವಾದಗಳಿಗೇನೂ ಕಡಿಮೆಯಿಲ್ಲ. ಆದರೆ ಮೃತ್ಯುವನ್ನು ಆರಾಧಿಸುವ ಜೀವ ವಿರೋಧಿಕೃತ್ಯದ ಸಮರ್ಥನೆಗಾಗಿ ಶಾಸ್ತ್ರಗ್ರಂಥಗಳಿರಲಿ, ಸ್ವಾತಂತ್ರ್ಯದ ವ್ಯಾಖ್ಯಾನವಾಗಲೀ ಬೇಕಿಲ್ಲವೆಂಬುದನ್ನು ಎಲ್ಲರೂ ಒಪ್ಪಬೇಕಾಗಿದೆ. ಆದ್ದರಿಂದ ಈಗ ಮಧ್ಯಪ್ರದೇಶ ಸರ್ಕಾರ ಈಗ ನಡೆದ ಸತಿಯ ಆಚರಣೆಗೆ ಕಾರಣರಾದ ಅವರ ಕುಟುಂಬದವರನ್ನು ಆಚರಣೆಯಲ್ಲಿ ಭಾಗವಹಿಸಿದ, ಪ್ರತ್ಯಕ್ಷದರ್ಶಿಗಳಾದ ಸಮಸ್ತರನ್ನೂ ಶಿಕ್ಷಿಸಬೇಕಾಗಿದೆ. ಕುಟ್ಟುಬಾಯಿಯನ್ನು ರಕ್ಷಿಸಲು ಬಂದ ಪೋಲೀಸರನ್ನು ಹೊಡೆದು ದಂಡಿಸಿದ ಹಳ್ಳಿಗರನ್ನೂ ಶಿಕ್ಷಿಸಬೇಕು. ಈ ರೀತಿಯ ಕ್ರಮಕ್ಕೆ ಸಾಕಷ್ಟು ಪ್ರಚಾರಸಿಕ್ಕಿ ದೇಶದ ಎಲ್ಲ ರಾಜ್ಯಗಳ ಜನತೆಗೂ ಸತಿ ಯ ಆಚರಣೆ ಶಿಕ್ಷಾರ್ಹ ಅಪರಾಧವೆಂಬುದು ಮನವರಿಕೆಯಾಗಬೇಕು.

ಸತ್ತ ಗಂಡನ ಚಿತೆಯಲ್ಲಿ ಸತಿ ಹೋಗುವ ಮಹಿಳೆಯಿಂದ ಅವಳ ಕುಟುಂಬಕ್ಕೆ ಗ್ರಾಮಕ್ಕೆ ಸುಖ ಸಮೃದ್ಧಿಗಳು ದೊರಕುತ್ತವೆ. ಎಂಬುದು ಜನರ ಮೂಢ ನಂಬಿಕೆಯ ಪರಮಾವಧಿ. ಹಳ್ಳಿಗಳಿಗೆ ಒದಗಿ ಬಂದಿರುವ ಬರಗಾಲ ಪರಿಹಾರಕ್ಕೆ ಮಳೆರಾಯನ ಆಗಮನಕ್ಕೆ ಸಸ್ಯ ಸಮೃದ್ಧಿಗೆ ಸತಿ ಯಾಗುವುದೇ ಪರಿಹಾರವಾಗುವುದಾದರೆ ಅಂತಹ ಮಿಮಾಂಸೆಯನ್ನು ಹುಟ್ಟಿಹಾಕಿರುವ ಪುರುಷಸಂಸ್ಕೃತಿ ಎಷ್ಟೊಂದು ಅಮಾನುಷವಾದುದು ಎಂಬುದರ ಅರಿವಾಗುತ್ತದೆ. ಈ ದರ್ಶನವನ್ನು ತಲೆ ಮಾರುಗಳಲ್ಲಿ ಜನರ ಮನಸ್ಸಿನಲ್ಲಿ ಹುಟ್ಟಿಹಾಕಿರುವ ಯೋಜನೆಯ ವಿರುದ್ಧದ ಹೋರಾಟ ಕೇವಲ ಸರ್ಕಾರದಿಂದ ಸಾಧ್ಯವಿಲ್ಲ. ಎಲ್ಲ ಪ್ರಗತಿಪರ ಹೋರಾಟಗಳ ಆಸಕ್ತಿಯಾಗಬೇಕು. ಸರ್ಕಾರವೂ ತನ್ನ ಕಾರ್ಯಕ್ರಮದ ಒಂದಂಶವಾಗಿ ಇದನ್ನು ಸೇರಿಸಿಕೊಳ್ಳಬೇಕು.

ರೂಪಕನ್ವರಳ ಸಾವಿನ ಸಂದರ್ಭದಲ್ಲಿ ದೇವರಾಲದಲ್ಲಿ ಗುಡಿಕಟ್ಟಿ ವಾಣಿಜ್ಯ ಕೇಂದ್ರವನ್ನಾಗಿ ಮಾಡಿದ್ದು ಎಲ್ಲರಿಗೂ ತಿಳಿದಿದೆ. ಈಗ ತಮೋಲಿಯಯಲ್ಲೂ ಅಂತಹ ಬೆಳವಣಿಗೆಗಳು ಆಗದಂತೆ ಮಧ್ಯಪ್ರದೇಶದ ಸರ್ಕಾರ ಶ್ರಮವಹಿಸಬೇಕು. ಸತಿ ಯೆನ್ನುವುದು ಅಮಾನುಷ ಆಚರಣೆಯೆಂದೂ, ಶಿಕ್ಷಾರ್ಹ ಅಪರಾಧವೆಂಬುದನ್ನು ಸರ್ಕಾರವೂ ಒಪ್ಪಿಕೊಂಡು ಶಾಸನ ಮಾಡಿರುವುದರಿಂದ ದೇಶವ್ಯಾಪಿಯಾಗಿ ಎಲ್ಲೆಲ್ಲಿ ಸತಿ ದೇವಾಲಯಗಳಿವೆಯೋ ಅವೆಲ್ಲವನ್ನೂ ಮುಚ್ಚುವ ಪೂಜೆಯಾಗದಂತೆ ತಡೆಯುವಂತಹ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಜನರ ಮನಸ್ಸಿನಲ್ಲಿರುವ ಮೂಢನಂಬಿಕೆಗಳನ್ನು ತೊಡೆಯಲು ಇದೂ ಒಂದು ಮುಖ್ಯ ಹೆಜ್ಜೆಯಾಗಬಹುದು.

ಗುಜುರಾತ್ ಹತ್ಯಾಕಾಂಡದ ಸಂದರ್ಭದಲ್ಲಿ ಘಟನೆ ನಡೆದ ಸ್ಥಳಕ್ಕೆ ತಕ್ಷಣ ಭೇಟಿ ನೀಡದ ಮತ್ತು ಎಲ್ಲರ ಆಕ್ಷೇಪಕ್ಕೆ ಗುರಿಯಾದ ರಾಷ್ಟ್ರೀಯ ಮಹಿಳಾ ಆಯೋಗ ಈ ಬಾರಿ ಘಟನೆ ನಡೆದ ಸ್ಥಳಕ್ಕೆ ಭೇಟಿ ನಿಡಿರುವುದು ಸ್ವಾಗತಾರ್ಹವಾದರೂ, ಸಮಿತಿಯು ಘಟನೆಯನ್ನು ಕುರಿತಂತೆ ಗಮನಿಸಿರುವ ಅಂಶಗಳು ಅವರ ರಾಜಕೀಯ ಒಲವುಗಳನ್ನೇ ಮತ್ತೆ ಪ್ರತಿನಿಧಿಸುತ್ತದೆ. ತಮೋಲಿಯಲ್ಲಿ ನಡೆದ ಸತಿ ಪ್ರಕರಣದ ಸಂದರ್ಭದಲ್ಲಿ ಪೋಲೀಸರು ನಿಷ್ಕ್ರಿಯರಾಗಿದ್ದರು ಎಂಬುದಾಗಿ ಹೇಳಿರುವ ಮಹಿಳಾ ಆಯೋಗದ ನಿಲುವು ಪ್ರಶ್ನಾರ್ಹವೇ !

ರೂಪಕನ್ವರ್, ಕುಟ್ಟುಬಾಯಿಯ ಪ್ರಕರಣಗಳು ನಮ್ಮ ಭವ್ಯ ಸಂಸ್ಕೃತಿಯ ಕಪ್ಪು ಚುಕ್ಕೆಗಳು. ಭಾರತೀಯ ಸಂಸ್ಕೃತಿಯ ವಕ್ತಾರರು ಈ ಅಂಶವನ್ನು ಮೊದಲು ಗಮನಿಸಬೇಕು. ಇಂತಹ ಕಪ್ಪು ಚುಕ್ಕೆಗಳನ್ನು ಅಳಿಸಿದ ಹೊರತು ಸಂಸ್ಕೃತಿಯ ಬಗ್ಗೆ ಯಾರೂ ಹೆಮ್ಮೆ ಪಟ್ಟುಕೊಳ್ಳಲು ಸಾಧ್ಯವಿಲ್ಲ. ಅಲ್ಲಿಯವರೆಗೂ ಈ ದಿಕ್ಕಿನಲ್ಲಿ ಹೋರಾಟನಿಲ್ಲದೆ ಸಾಗಬೇಕು.

- ಎನ್. ಗಾಯಿತ್ರಿ

ಮೂರು ಹೆಜ್ಜೆ ಮುಂದೆ, ಎರಡು ಹೆಜ್ಜೆ ಹಿಂದೆ

- ನೂಪುರ್ ಬಸು

ಪ್ರತಿ ವರ್ಷವೂ ಮಾರ್ಚ್ 8ನೇ ತಾರೀಖು, ಪ್ರಪಂಚದ್ಯಾಂತ ಮಹಿಳೆಯ ಸ್ಥಾನಮಾನವನ್ನು ಕುರಿತು ಪರ್ಯಾವಲೋಕನ ಮಾಡುವ ದಿನವಾಗಿದೆ. ಈ ದಿಸೆಯಲ್ಲಿ ಏನೆಲ್ಲ ಮುನ್ನಡೆ ಸಾಧ್ಯವಾಗಿದೆ, ಎದುರಾದ ಅಡೆತಡೆಗಳೇನಿವೆ ತಿಳಿವ ದಿನವಾಗಿದೆ. 'ಪ್ರತಿವರ್ಷವೂ ನಡೆವ ಈ ಮಾರ್ಚ್ 8ರ ಒಟ್ಟು ಪರಿಣಾಮವನ್ನು ನೋಡಿದರೆ, ಮಹಿಳೆಯರು ಎರಡು ಹೆಜ್ಜೆ ಮುಂದೆ ಮೂರು ಹೆಜ್ಜೆ ಹಿಂದೆ ಹಾಕುತ್ತಿದ್ದಾರೆ' ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ನಾನು ಆಶಾವಾದಿಗಳಂತೆ, ಪ್ರತಿ ವರ್ಷವೂ ಮಹಿಳೆಯರು ಮೂರು ಹೆಜ್ಜೆ ಮುಂದಕ್ಕೆ, ಎರಡು ಹೆಜ್ಜೆ ಹಿಂದಕ್ಕೆ ಇಟ್ಟಿದ್ದಾರೆಂದು ನಂಬುತ್ತೇನೆ.

> ಅಚಲ ದಶಮಾನೋತ್ಸವ ಸಂದರ್ಭದಲ್ಲಿ 1996ರಲ್ಲಿ ನಡೆದ ವಿಚಾರ ಸಂಕಿರಣ ಶ್ರೀಮತಿ ನೂಪುರ್‌ಬಸು ಮಂಡಿಸಿದ ಈ ಪ್ರಬಂಧವು ಇಂದಿಗೂ ತನ್ನ ಪ್ರಸ್ತುತತೆಯನ್ನು ಹೊಂದಿರುವಾ ಕಾರಣದಿಂದ ಇಲ್ಲಿ ಪ್ರಕಟಿಸುತ್ತಿದ್ದೇವೆ.
>
> - ಸಂ.

ಮೊದಲು ಕೆಟ್ಟ ಸುದ್ದಿಗಳನ್ನೆಲ್ಲ ಹೊರ ಹಾಕೋಣ, ನಂತರ ಒಳ್ಳೆಯ ಸುದ್ದಿಗಳನ್ನಿಷ್ಟು ಸವಿಯಬಹುದು.

ಕಳೆದ ವರ್ಷ ನೈನಾಸಾಹ್ನಿಯ ಅತ್ಯಂತ ಭೀಕರ ಕೊಲೆಯನ್ನು ದೇಶ ಕಂಡಿತು. ನೈನಾಳನ್ನು ಕೊಂದು ಹೋಟೆಲಿನ 'ತಂದೂರ್ ಒಲೆ'ಯಲ್ಲಿ ತುರುಕಲಾದ ಈ ಬರ್ಬರ ಕೃತ್ಯ ಇಡೀ ನಾಡನ್ನೇ ನಡುಗಿಸಿತು. ದೇಶದಾದ್ಯಂತ ವೃತ್ತಪತ್ರಿಕೆಗಳು ಈ 'ತಂದೂರ್ ಕೊಲೆ'ಯ ಬಗ್ಗೆ ಚೀತ್ಕರಿಸಿದರೆ, ದೂರದರ್ಶನ ಕ್ಯಾಮರಾಗಳು ಮಾತ್ರ ಸುಶೀಲಶರ್ಮ ಹೊಸಕೋಟೆಯ ನ್ಯಾಯಾಧೀಶರ ಮುಂದೆ ಕೋಳ ತೊಟ್ಟು ಶರಣಾಗತನಾಗುವುದನ್ನು ತೋರಿಸಿದವು. ತಟ್ಟನೆ ನೆನಪಾದದ್ದು ಕೆಲವು ವರ್ಷಗಳ ಹಿಂದಿನ ಘಟನೆ. ರೂಪ ಕನ್ವಾರಳನ್ನು ರಾಜಸ್ಥಾನದ ಡಿಯೋರಾಲದಲ್ಲಿ ಬಲವಂತವಾಗಿ 'ಸತಿ'ಯಾಗಿಸಿದ ಘಟನೆ.

ಇಂದು ನಮ್ಮ ದೇಶಧಲ್ಲಿ ಸಾವಿರಾರು ಮಹಿಳೆಯರು ವರದಕ್ಷಿಣೆ ತರಲಿಲ್ಲವೆಂಬ ಕಾರಣಕ್ಕೆ, ಗಂಡು ಹಡೆಯಲಿಲ್ಲವೆಂಬ ಕ್ಷುಲ್ಲಕ ಕಾರಣಗಳಿಗೂ ಕೊಲೆಗೀಡಾಗುತ್ತಿದ್ದಾರೆ. ಇನ್ನುಳಿದ ಸಾವುಗಳಿಗೂ ಇಂತಹುದೇ ನೆಪಗಳಿವೆ. ಕುಡುಕ ಗಂಡಂದಿರ ಕಾಟ ತಾಳಲಾರದೆ, ಸಾವಿಗೆ ಶರಣಾದವರಿದ್ದಾರೆ.

ಇಂತಹ ಘೋರಕೃತ್ಯಗಳನ್ನು ಕಾಣಲು ದೆಹಲಿ ಅಥವಾ ರಾಜಸ್ಥಾನಗಳಿಗೆ ಹೋಗಬೇಕಿಲ್ಲ. ನಾವಿರುವ ಜಾಗದಲ್ಲಿನ ಅಂಕಿ-ಅಂಶಗಳನ್ನು ತೆಗೆದುಕೊಳ್ಳೋಣ. ಬೆಂಗಳೂರುನಲ್ಲಿಂದು ಬೆಂಕಿ ಆಕಸ್ಮಿಕದಿಂದ ಸುಟ್ಟು ಸಾಯುವ ಯುವತಿಯರ ಪ್ರಮಾಣ ಗಾಬರಿಗೊಳಿಸುವಷ್ಟು ಹೆಚ್ಚಿದೆ. ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟಗಾಯದ ವಿಭಾಗವು ಶೇಕಡಾ 70ಕ್ಕೂ ಹೆಚ್ಚು ಎಳೆಯ ಹುಡುಗಿಯರನ್ನು ದಾಖಲು ಮಾಡಿಕೊಂಡಿದೆ. ಇದು ದಕ್ಷಿಣ ಏಷ್ಯಾದಲ್ಲಿಯೇ ಅತ್ಯಧಿಕ ಸಂಖ್ಯೆಯಾಗಿದೆ. 1994ರಲ್ಲಿ 55 ಮಂಚಗಳಿರುವ ಈ ವಿಭಾಗವು, 1700 ಸುಟ್ಟಗಾಯಾಳುಗಳನ್ನು ದಾಖಲು ಮಾಡಿಕೊಂಡಿತು. ಅದರಲ್ಲಿ 1200 ಜನ ಮಹಿಳೆಯರಾಗಿದ್ದರು! ಇವರಲ್ಲಿ ಶೇಕಡಾ ತೊಂಬತ್ತು ಜನರು ಸಾವಿಗೀಡಾದರು. ಬಹಳಷ್ಟು ಮಹಿಳೆಯರನ್ನು ಬೆಂಕಿ ಹಚ್ಚಿ ಇತರರು ಸಾವಿಗೆ ತಳ್ಳಿದ್ದಾರೆ ಅಥವಾ ವರದಕ್ಷಿಣೆ, ಬಂಜೆತನ, ಬಹುಪತ್ನಿತ್ವದ ಕಾಟ ತಡೆಯಲಾರದೆ ತಾವೇ ಬೆಂಕಿಗೆ ಆಹುತಿಯಾಗಿದ್ದಾರೆ. 1994ರಲ್ಲಿ ಇದೊಂದೇ ಆಸ್ಪತ್ರೆಯಲ್ಲಿ ಸಾವಿರಕ್ಕೂ ಹೆಚ್ಚು ಹೆಂಗಸರು ಮೂರನೇ ಮಟ್ಟದ ಸುಟ್ಟಗಾಯಗಳಿಂದ ಸತ್ತಿದ್ದಾರೆ. ಪೋಲೀಸರ ದಾಖಲೆಗಳು ಕೇವಲ 21 ಸುಟ್ಟಗಾಯದ ಕೇಸುಗಳನ್ನು ತೋರುತ್ತವೆ.

ಈ ವಾರ್ಡುಗಳ ಡಾಕ್ಟರುಗಳಿಂದ ಸ್ಪಷ್ಟವಾಗಿ ತಿಳಿಯ ಬಂದದ್ದೇನೆಂದರೆ, ಬೆಂಕಿಗೆ ಆಹುತಿಯಾದ ಬಹಳಷ್ಟು ಮಹಿಳೆಯರು 'ತಮ್ಮ ಮಕ್ಕಳನ್ನಾದರೂ ಚೆನ್ನಾಗಿ ನೋಡಿಕೊಳ್ಳಬಹುದೆಂಬ' ಆಸೆಯಿಂದ ಗಂಡ ಅಥವಾ ಅವನ ಸಂಬಂಧಿಗಳನ್ನು ಸಿಕ್ಕಿ ಹಾಕಿಸುವುದಿಲ್ಲ. ಮತ್ತೆ ಕೆಲವರು ಸಾಯುವ ವೇಳೆಯಲ್ಲಿ ಡಾಕ್ಟರ್ ಬಳಿ ಯಥಾವತ್ತಾಗಿ ನಡೆದ ಘಟನೆಯನ್ನು ಹೇಳಿದರೂ, ಇಂತಹ ಹೇಳಿಕೆಗಳು ನ್ಯಾಯಾಂಗದಡಿ ಫಲ ನೀಡುತ್ತಿಲ್ಲ. ರೋಗಿಯ ಮರಣ ಸಮಯದ ಹೇಳಿಕೆಗಳನ್ನು ಪೋಲೀಸರು ದಾಖಲು ಮಾಡದಿದ್ದಾಗ, ಡಾಕ್ಟರುಗಳು ರೋಗಿಗಳಿಂದ ಸಾಯುವ ಸಮಯದಲ್ಲಿ ತೆಗೆದುಕೊಂಡ ಹೇಳಿಕೆಗಳನ್ನು ನ್ಯಾಯಾಂಗದಲ್ಲಿ ಪುರಾವೆಯಾಗಿ ಉಪಯೋಗಿಸಬೇಕು. ಆದರೆ ಹಾಗಾಗುತ್ತಿಲ್ಲ. ಸಮಾಜ ಮತ್ತು ನ್ಯಾಯಾಂಗಗಳು ಇಂತಹ ಮಹಿಳೆಯರನ್ನು ಕಡೆಗಣಿಸಿ ಅವರು ಸತ್ತ ಮೇಲೂ ನ್ಯಾಯ ದೊರಕಿಸುವಲ್ಲಿ ವಿಫಲವಾಗುತ್ತಿವೆ. ಇಂತಹ ಸಿನಿಕಭಾವ ಅಥವಾ ನಿಷ್ಠುರತೆಗಳನ್ನು ಕೊಲೆಗಾರರು ಸುಲಭವಾಗಿ ತಪ್ಪಿಸಿಕೊಳ್ಳಲು ಹಾಗೂ ಉಳಿದವರಿಗೆ ಇಂತಹ ಭೀಕರ ಕೃತ್ಯಗಳನ್ನು ಯಾವುದೇ ನ್ಯಾಯಾಂಗದ ಭಯವಿಲ್ಲದೆ ಎಸಗಲು ಪ್ರೋತ್ಸಾಹ ಕೊಡುತ್ತಿವೆ. ಇಂತಹ ಕೆಟ್ಟ ಉದಾಹರಣೆಗಳು ಭಾರತದ ಉದ್ದಗಲಕ್ಕೂ ಇಂದು ಕಾಣಬಹುದಾಗಿದೆ. ದೇಶಾದ್ಯಂತ ಸಂಗ್ರಹಿಸಿದ ಇತ್ತೀಚಿನ ಅಂಕಿ-ಸಂಖ್ಯೆಗಳ ಪ್ರಕಾರ ಶೇಕಡಾ 60ರಷ್ಟು ಬೆಂಕಿಗೆ ಆಹುತಿಯಾಗುವವರು ಮಹಿಳೆಯರು. ಇದರಲ್ಲಿ ಅಧಿಕಾಂಶ

ಕೊಲೆ ಅಥವಾ ಆತ್ಮಹತ್ಯೆಗಳೆಂದು ಸಾಬೀತಾಗಿದ್ದರೂ, ದಂಡನೆಗೆ ಗುರಿಯಾದವರ ಸಂಖ್ಯೆ ಅತಿ ಕಡಿಮೆ.

ಆದ್ದರಿಂದಲೇ ತಮ್ಮ ಯೌವನದಲ್ಲಿ ಸಾಮಾಜಿಕ ದೌರ್ಜನ್ಯಗಳಿಂದ ಸಾವನ್ನಪ್ಪುತ್ತಿರುವ ಭಾರತೀಯ ಮಹಿಳೆಯರ ಸಂಖ್ಯೆ ಜಾಸ್ತಿಯಾಗಿದೆ. ಹೆಸರಾಂತ ಅರ್ಥಶಾಸ್ತ್ರಜ್ಞ ಅಮಾರ್ತ್ಯಸೇನರು ನಮ್ಮ ದೇಶದಲ್ಲಿ ಇಳಿ ಮುಖ್ಯವಾಗುತ್ತಿರುವ ಮಹಿಳೆಯರ ಸಂಖ್ಯೆಯನ್ನು ಕುರಿತು 'ಕಾಣೆಯಾದ ಹೆಂಗಸರ' ಬಗ್ಗೆ ಇತ್ತೀಚೆಗೆ ಆಡಿದ ಮಾತುಗಳು, ಲಿಂಗಪ್ರಮಾಣದ ವಕ್ರತೆಯ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ. ಎಲ್ಲ ನಾಗರೀಕ ಸಮಾಜಗಳಲ್ಲೂ ಮಹಿಳೆಯರ ಸಂಖ್ಯೆ ಗಂಡಸರಿಗಿಂತ ಹೆಚ್ಚಾಗಿದ್ದರೂ, ಭಾರತದಲ್ಲಿ ಮಾತ್ರ ಈ ಪ್ರಮಾಣ ಪುರುಷಪರವಾಗಿದೆ. ಕಳೆದ ಜನಗಣತಿಯ ಪ್ರಕಾರ ಪ್ರತಿ ಸಾವಿರ ಪುರುಸರಿಗೆ 927 ಮಹಿಳೆಯರಿದ್ದಾರೆ. ಕೇರಳದಲ್ಲಿ ಮಾತ್ರ ಅಪವಾದವೆಂಬಂತೆ ಪ್ರತಿ ಸಾವಿರ ಪುರುಷರಿಗೆ 1017 ಮಹಿಳೆಯರಿದ್ದಾರೆ. ಇಪ್ಪತ್ತನೇ ಶತಮಾನದ ಆದಿಯಲ್ಲಿ ಪ್ರತಿ ಸಾವಿರ ಪುರುಷರಿಗೆ 972 ಮಹಿಳೆಯರಿದ್ದರು. ಅಂದರೆ ಇತ್ತೀಚಿನ ವರ್ಷಗಳಲ್ಲಿ 'ಕಾಣೆಯಾದ ಮಹಿಳೆಯರ' ಸಂಖ್ಯೆ ಇಳಿಯುವುದರ ಬದಲು ಹೆಚ್ಚಾಗಿದೆ.

ಹುಟ್ಟುವ ಕೂಸು ಹೆಣ್ಣೆಂದು ತಿಳಿದೊಡನೆಯೇ ಭ್ರೂಣ ಹತ್ಯೆ ಮತ್ತು ಹುಟ್ಟಿದೊಡನೆಯೇ ಶಿಶುಹತ್ಯೆಯ ವರದಿಗಳು ಪಂಜಾಬಿನಿಂದ ಕನ್ಯಾಕುಮಾರಿಯವರೆಗೆ ತೂರಿ ಬರುತ್ತಿವೆ. ಗಂಡು ಸಂತಾನದ ಅತಿಯಾಸೆ ಮತ್ತು ಹೆಣ್ಣು ಕೂಸಿನ ಬಗ್ಗೆ ನಿಕೃಷ್ಟ ಭಾವನೆ ಬರೀ ಉತ್ತರಪ್ರದೇಶ ಮತ್ತು ಬಿಹಾರದ ಪ್ರಾಂತ್ಯಗಳಿಗೆ ಸೀಮಿತವೆಂದು ತಿಳಿದಿದ್ದಾರೆ, ಆಘಾತಗೊಳಿಸುವಂತಹ ಹೆಣ್ಣು ಶಿಶುಹತ್ಯೆಯ ಸುದ್ದಿಗಳು ತಮಿಳುನಾಡಿನ ಸೇಲಂ ಪ್ರದೇಶದಿಂದ ಇತ್ತೀಚೆಗೆ ಕೇಳಿ ಬರುತ್ತಿವೆ. ಇದು ಕೂಡಾ ಆಕಸ್ಮಿಕವಾಗಿ ತಿಳಿದು ಬಂದ ವಿಷಯ. ಜಿಲ್ಲೆಯ ಆರೋಗ್ಯಾಧಿಕಾರಿಗಳು ಇದ್ದಕ್ಕಿದ್ದಂತೆ ಹೆಚ್ಚಿದ ಶಿಶು ಸಾವಿನ ಸಂಖ್ಯೆಯನ್ನು ಗಮನಿಸಿದರು. ಇದರ ಬಗ್ಗೆ ತನಿಖೆ ನಡೆಸಿದಾಗ, ಹೆಣ್ಣು ಕೂಸುಗಳನ್ನು ಹುಟ್ಟಿದ ಕೂಡಲೆ ಕೊಲ್ಲುತ್ತಿರುವುದು ತಿಳಿದು ಬಂದಿತು. ಜನ್ಮವಿತ್ತವರು ಈ ಹೆಣ್ಣು ಶಿಶುಗಳ ಕೊಲೆಯನ್ನು ನಿರಾಯಾಸವಾಗಿ ಮಾಡಿ ಮುಗಿಸುತ್ತಿದ್ದರು. ಸೇಲಂಜಿಲ್ಲೆಯಲ್ಲಿ ಎಲ್ಲೆಲ್ಲೂ ಬೆಳೆಯುವ ಕಳ್ಳಿಗಿಡದ ಬಿಳಿರಸವನ್ನು ನೀರು ಅಥವಾ ಹಾಲಿನೊಂದಿಗೆ ಬೆರೆಸಿಕೊಟ್ಟರೆ ಕೂಸು ತಕ್ಷಣವೇ ಸಾಯುತ್ತಿತ್ತು.

ಈ ಸುದ್ದಿಗಳನ್ನು ಮಾಧ್ಯಮಗಳು ಮೇಲೆತ್ತಿದ್ದಾಗ ಜಯಲಲಿತ ಆಡಳಿತಕ್ಕೆ ಪೆಟ್ಟು ಉಂಟಾಯಿತು. ಆಕೆ ಈ ಹೆಣ್ಣು ಶಿಶುಹತ್ಯೆಗಳನ್ನು ತಡೆಯಲು 'ತೊಟ್ಟಿಲ ಮಗು ಯೋಜನೆ'ಯನ್ನು ಪ್ರಕಟಿಸಿದರು. ಈ ಯೋಜನೆಯ ಪ್ರಕಾರ ಹೆಣ್ಣು ಮಗು ಬೇಡಾದ ತಾಯ್ತಂದೆಯರು ಅದನ್ನು ಸಾಯಿಸದೆ, ಅವನ್ನು ಬೆಳೆಸಲು ಆಡಳಿತಕ್ಕೆ ಒಪ್ಪಿಸಬಹುದು..ಇದಕ್ಕೋಸ್ಕರ ರಾಜ್ಯ ಸರ್ಕಾರವು ಎಲ್ಲೆಲ್ಲೂ ತೊಟ್ಟಿಲುಗಳನ್ನು ತೂಗು ಹಾಕಿತು. ಹೆಣ್ಣು ಮಕ್ಕಳನ್ನು ಬೇಡವಾದ ಜನ್ಮವಿತ್ತವರು ರಾತ್ರಿಯ ಕತ್ತಲೆಯಲ್ಲಿ ಮಕ್ಕಳನ್ನು ತಂದು ಇಂತಹ ತೊಟ್ಟಿಲುಗಳಿಗೆ ಹಾಕುತ್ತಿದ್ದರು. ಆಡಳಿತವು ಈ ಮಕ್ಕಳನ್ನು ದತ್ತು ಕೊಡುವ ಯೋಜನೆಯಡಿ ಇರಿಸಿತು. ಈ ಯೋಜನೆ ಶುರುವಾದ ಮೂರು ವರ್ಷದಲ್ಲಿ ಸುಮಾರು 100 ಹೆಣ್ಣು ಮಕ್ಕಳನ್ನು ರಕ್ಷಿಸಿರುವುದಾಗಿ ಸರಕಾರ ಹೇಳಿತು. ಶಿಶು ಹತ್ಯೆಯ ಬಗ್ಗೆ ಕಣ್ಣಿಟ್ಟು ಕಾವಲು ಕಾಯುವುದು ಹೆಚ್ಚಾಗಿ, ದೇಶದಲ್ಲಿಯೇ ಮೊದಲ ಬಾರಿಗೆ, ಹೆಣ್ಣು ಶಿಶುವನ್ನು ಸಾಯಿಸಿದ ಸೇಲಂನ ಓರ್ವ ತಂದೆಗೆ ಜೀವಾವಧಿ ಶಿಕ್ಷೆ ವಿಧಿಸಿದರು.

ಭಾರತದಲ್ಲಿ ಮಗ ಹೆಚ್ಚೆಂಬ ಭ್ರಾಂತಿ ಮುಂದುವರೆಯುತ್ತಲೇ ಇದೆ. ಕಳೆದೆರಡು ವರ್ಷಗಳ ಹಿಂದೆ ಮಹಿಳಾ ಸಂಘಗಳು ಮತ್ತು ದೇಶದ ವಿಚಾರವಾದಿ ವೇದಿಕೆಗಳು ಕೇರಳ ರಾಜ್ಯದಲ್ಲಿ ಕರುಣಾಕರನ್ ಆಡಳಿತವು ಪುತ್ರಕಾಮೇಷ್ಟಿ ಯಾಗಕ್ಕೆ ಒತ್ತು ಕೊಟ್ಟದ್ದನ್ನು ಆಘಾತ ಮತ್ತು ಜುಗುಪ್ಸೆಯಿಂದ ನೋಡಿದವು. ಸಾವಿರಾರು ದಂಪತಿಗಳಿಗೆ ಗಂಡು ಸಂತಾನದ ಆಮಿಷಕ್ಕೆ ಒಳಗಾಗಿ ಈ ಯಜ್ಞದಲ್ಲಿ ಭಾಗಿಯಾದರು. ಗಂಡು ಸಂತಾನವಿಲ್ಲದ ದಂಪತಿಗಳು ಕಳೆದ ಯಾವುದೋ ಜನ್ಮದಲ್ಲಿ ಪಾಪ ಮಾಡಿದ್ದಿರಬೇಕು ಮತ್ತು ಈ ಯಜ್ಞದಿಂದ ಅವರುಗಳು ತಮ್ಮ ಪಾಪಗಳನ್ನು ತೊಳೆದುಕೊಳ್ಳಲು ಅವಕಾಶವಾಗಿದೆಯೆಂದು ಸಂಚಾಲಕರು ಹೇಳಿದ್ದರು. 'ದಶರಥನು ಈ ಪುತ್ರಕಾಮೇಷ್ಠಿಯನ್ನು ಮಾಡಿ ಪುತ್ರ ಸಂತಾನವನ್ನು ಪಡೆದನು. ಅದರಂತೆ ಇಂದಿನ ಆಧುನಿಕ ದಶರಥರೂ, ಅವರ ಪತ್ನಿಯರೂ ಪಡೆಯಬಹುದೆಂದು' ಸಾರಿದರು.

ಇಂತಹ ಕಪಟ ಕಾರ್ಯಕ್ರಮದಿಂದ ಯಜ್ಞದ ಸಂಚಾಲಕ ಸಂಸ್ಥೆ ಲಕ್ಷಗಟ್ಟಲೆ ಹಣ ಸಂಪಾದಿಸಿತು. ಈ ಯಜ್ಞದಲ್ಲಿ ಪಾಲ್ಗೊಂಡ ದಂಪತಿಗಳು ಪುತ್ರ ಸಂತಾನ ಪಡೆದರೇ ಎಂಬುದಕ್ಕೆ ಅವರು ಹೇಳಿದುದು ಇಷ್ಟೇ 'ಯಾರಿಗೆ ಶ್ರದ್ಧೆಯಿತ್ತೋ ಅವರು ಮಾತ್ರ ಗರ್ಭ ಧರಿಸಿದರು'. ಈ ನಾಚಿಕೆಗೇಡಿನ ಘಟನೆ ನಡೆದ ಕೊಚಿನ್‌ನಲ್ಲಿ ಮಹಿಳಾ ಸಂಘಟನೆಗಳು ಬೀದಿಗಿಳಿದು ಪ್ರತಿಭಟಿಸಿದರು. ಇಂತಹ ಅವಮಾನಕರ ಆಚರಣೆಯನ್ನು ಅದರಲ್ಲೂ ಗಂಡು ಮಗುವನ್ನು ವೈಭವೀಕರಿಸುವ ಸಮಾಜದಲ್ಲಿ ಮತ್ತಷ್ಟು ಹೆಣ್ಣನ್ನು ಅಂಚಿಗೆ ತಳ್ಳುವ ಇಂತಹ ಆಚರಣೆಯನ್ನು ಪ್ರತಿಭಟಿಸಿದರು. ಅಂದಿನ ಮುಖ್ಯಮಂತ್ರಿಗಳಾದ ಕೆ. ಕರುಣಾಕರನ್ ಈ ಸಮಾರಂಭದ ಮುಖ್ಯ ಅತಿಥಿಗಳಾಗಬೇಕಿದ್ದವರು. ಇಂತಹ ಕ್ಷುಲ್ಲಕ ಸಮಾರಂಭಕ್ಕೆ ರಾಜ್ಯ ಸರಕಾರ ಪ್ರೋತ್ಸಾಹ ನೀಡುವುದನ್ನು ಜನತೆ ಪ್ರತಿಭಟಿಸಿದಾಗ, ಮುಖ್ಯಮಂತ್ರಿಗಳು ಸಮಾರಂಭದಿಂದ ದೂರ ಉಳಿದರೂ, ಹಿನ್ನೆಲೆಯಲ್ಲಿ ಅವರಿತ್ತ ಪ್ರೋತ್ಸಾಹ ಎಲ್ಲರಿಗೂ ಸ್ಪಷ್ಟವಾಗಿ ತಿಳಿದಿತ್ತು.

ಭ್ರೂಣಹತ್ಯೆ ಅಥವಾ ಶಿಶುಹತ್ಯೆಗೆ ಒಳಗಾಗದೆ ಉಳಿದ ಅದೃಷ್ಟಶಾಲೀ ಹೆಣ್ಣುಮಗುವಿಗೆ ಅತಂತ್ರ ಮತ್ತು ಹೋರಾಟದ ಬದುಕು ಕಾದಿರುತ್ತದೆ. ಹೆಣ್ಣು ಮಕ್ಕಳು ವಿದ್ಯೆಯಿಂದ ವಂಚಿತರಾಗುತ್ತಾರೆ. ಅಧಿಕೃತ ಅಂಕಿ-ಅಂಶಗಳ ಪ್ರಕಾರ ಪ್ರಾಥಮಿಕ ಶಾಲೆಗೆ ಸೇರಿದ ಮೂರನೇ ಒಂದರಷ್ಟು

ಹುಡುಗಿಯರು ತಮ್ಮ ವಿದ್ಯಾಭ್ಯಾಸ ನಿಲ್ಲಿಸಿ ಶಾಲೆ ಬಿಡುತ್ತಾರೆ. ಸರಕಾರವೂ ಈ ಬಗ್ಗೆ ನಿರ್ಲಕ್ಷವಾಗಿದೆ. ಇತ್ತೀಚೆಗೆ ವರ್ಲ್ಡ್ ಬ್ಯಾಂಕ್ ಮತ್ತಿತರ ಹಣಕಾಸು ಒದಗಿಸುವ ಸಂಸ್ಥೆಗಳ ಖಂಡನೆಯಿಂದಾಗಿ, ಈಗಿರುವ ಸ್ಥಿತಿಯನ್ನು ಉತ್ತಮ ಪಡಿಸಲು ಸರಕಾರ ಆರ್ಥಿಕ ಅನುದಾನಗಳನ್ನು ವಿಧಿಯಿಲ್ಲದೆ ಘೋಷಿಸಿದೆ.

ನಮ್ಮ ಸಮಾಜವು ಹೆಣ್ಣು ಮಕ್ಕಳನ್ನು ಕಾಪಾಡುವುದರಲ್ಲಿ ಹೆಚ್ಚು ವಿಫಲವಾಗಿದೆಯೆಂಬುದು ತೋರಿ ಬರುತ್ತಿದೆ. ತಂದೆಯಂತೆಯ ಅತ್ಯಂತ ಸನಿಹದ ಬಂಧುಗಳು ಚಿಕ್ಕ ಮಕ್ಕಳ ಮೇಲೆ ಬಲಾತಾರದಿಂದ ನಡೆಸುವ ಅಕ್ರಮ ಸಂಭೋಗಗಳ ಸಂಖ್ಯೆ ಹೆಚ್ಚುತ್ತಿದೆ. ಸರಕಾರೀ ನೌಕರ ಕರ್ಮಚಂದ ಝೂಕು, ತನ್ನ ಎಳೆಯ ಮಗಳನ್ನೇ ಬಲಾತ್ಕಾರ ಮಾಡಿದ ಘೋರ ಕೃತ್ಯ ಇತ್ತೀಚೆಗೆ ವರದಿಯಾಗಿದೆ. ಈ ಮೊಕದ್ದಮೆ ದೆಹಲಿ ಹೈಕೋರ್ಟಿಗೆ ಬಂದಾಗ, ಆಘಾತಕರವಾದ ನ್ಯಾಯ ನಿರ್ಣಯ ಹೊರಬಿತ್ತು. ನ್ಯಾಯಾಧೀಶರು ಆ ತಂದೆಯ ವಿರುದ್ಧ ಇದ್ದ ಅತ್ಯಾಚಾರದ ಆರೋಪಗಳನ್ನು ತಳ್ಳಿ ಹಾಕಿದರು! 1995ರಲ್ಲಿಯೇ ಸುಮಾರು 230 ಶಿಶು ಅತ್ಯಾಚಾರದ ವರದಿಗಳು ದೆಹಲಿ ಪೋಲೀಸರ ಬಳಿ ನೋಂದಾಯಿಸಲಾಗಿದೆ. ಇದು ದೇಶದಲ್ಲಾಗುವ ಶಿಶು ಅತ್ಯಾಚಾರದ ಶೇಕಡಾ 20ರಷ್ಟುಎಂದು ಪಿ.ಟಿ.ಐ.ನ ಇತ್ತೀಚಿನ ವರದಿಯಿಂದ ತಿಳಿದು ಬಂದಿದೆ. ಮೊದಲಿಗೆ ಚಿಕ್ಕ ಹುಡುಗಿಯರ ಮೇಲಿನ ಅತ್ಯಾಚಾರಗಳು, ಅದರಲ್ಲೂ ಅತ್ಯಂತ ಸನಿಹದ ಸಂಬಂಧಿಕರಿಂದ ನಡೆವ ಅತ್ಯಾಚಾರಗಳು, ಕುಟುಂಬದ ಹೆಸರನ್ನು ಕಾಪಾಡಲೋಸ್ಕರ ವರದಿಯೇ ಆಗುತ್ತಿರಲಿಲ್ಲ. ಇತ್ತೀಚೆಗೆ ಇಂತಹ ಘಟನೆಗಳು ಪೋಲೀಸ್ ಠಾಣೆಯಲ್ಲಿ ದಾಖಲಾಗುತ್ತಿರುವುದು ಕಂಡು ಬರುತ್ತಿದೆ. ಈ ಸಮಸ್ಯೆ ಬರೀ ದೆಹಲಿಗೆ ಸೀಮಿತವಾಗಿಲ್ಲ. ನೀವು ದಿನಪತ್ರಿಕೆಗಳ ಮೂರನೇ ಪುಟದಲ್ಲಿ ವರದಿಯಾಗುವ ಅಪರಾಧಗಳನ್ನು ಓದಿದರೆ, ಪ್ರತಿದಿನವೂ ಮಕ್ಕಳ ಮೇಲೆ ನಡೆಸುವ ಅತ್ಯಾಚಾರಗಳು ತಿಳಿದು ಬರುತ್ತವೆ.

ಮಹಿಳಾ ಸಂಘಗಳಾದ 'ಅಖಿಲ ಭಾರತದ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ' (ಎ.ಐ.ಡಿ.ಡಬ್ಲ್ಯು.ಎ.) ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಮತ್ತು ಅತ್ಯಾಚಾರಗಳನ್ನು ನೇರವಾಗಿ ಎದುರಿಸಲು ತೀರ್ಮಾನಿಸಿದೆ. ದೆಹಲಿಯಲ್ಲಿ ಇತ್ತೀಚೆಗೆ ಈ ಬಗ್ಗೆ ಬೃಹತ್ ಮೆರವಣಿಗೆ ನಡೆಯಿತು. ಈ ವಿಷಯದಲ್ಲಿ ಕಾಳಜಿ ವಹಿಸುವ ಮಹಿಳಾ ಸಂಘಗಳು ಒತ್ತಿ ಹೇಳುವುದೇನೆಂದರೆ, ಇದುವರೆಗೆ ಮಾತಾಡದೇ ಇದ್ದ ಚಿಕ್ಕ ಮಕ್ಕಳ ಮೇಲಿನ ಅತ್ಯಾಚಾರ ಹಾಗೂ ದೌರ್ಜನ್ಯಗಳನ್ನು ಸಾರ್ವಜನಿಕವಾಗಿ ಹೊರ ಹಾಕುವ ಸಮಯ ಬಂದಿದೆ. ಬಾಲ್ಯಾವಸ್ಥೆಯಲ್ಲಾದ ಅತ್ಯಾಚಾರಗಳ ಮಾಯದ ಗಾಯಗಳಿಂದ ನಮ್ಮ ಹೆಣ್ಣು ಮಕ್ಕಳನ್ನು ಮುಕ್ತಗೊಳಿಸಬೇಕಿದೆ. ಮನಃಶಾಸ್ತ್ರಜ್ಞರು ಹೇಳುವಂತೆ ಅವರು ಚಿಕಿತ್ಸೆನೀಡುವ ಬುದ್ಧಿಮಾಂದ್ಯ ವಯಸ್ಕ ಹೆಂಗಸರ ಪೈಕಿ ಮಕ್ಕಳಿದ್ದಾಗ ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರ ಶೇಕಡಾವಾರು ಸಂಖ್ಯೆ ಹೆಚ್ಚಿದೆ. ಇತ್ತೀಚೆಗೆ ಪಶ್ಚಿಮ ಬಂಗಾಳದ ಉಚ್ಚ ನ್ಯಾಯಾಲಯವು ಏಳು ಮಕ್ಕಳ ಮೇಲೆ ಅತ್ಯಾಚಾರ ಮಾಡಿದ ಅಪರಾಧಿಯೊಬ್ಬನಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ.

ಮಕ್ಕಳ ಮೇಲೆಯೇ ಅತ್ಯಾಚಾರ ಇಷ್ಟಿದ್ದರೆ, ಇನ್ನು ವಯಸ್ಕರ ಮೇಲಿನ ಲೈಂಗಿಕ ದೌರ್ಜನ್ಯಗಳು ಎಷ್ಟೆಂದು ವಿವರಿಸುವುದು ಬೇಕಿಲ್ಲ. ಲೋಕಸಭೆಯಲ್ಲಿ ಮಂಡಿಸಿದ ಅಂಕಿ ಅಂಶಗಳ ಪ್ರಕಾರ, ವರದಿಯಾದ ಲೈಂಗಿಕ ಬಲಾತ್ಕಾರಗಳ ಸಂಖ್ಯೆ 1986ರಲ್ಲಿ 7322 ಇದ್ದದ್ದು, 1993ರಲ್ಲಿ 11,17ಕ್ಕೆ ಏರಿತ್ತು. ಈ ಸಂಖ್ಯೆ ಇಂದು ಮತ್ತಷ್ಟು ಹೆಚ್ಚಿದೆ. ಮಹಿಳಾ ಸಂಘಗಳು ಹೇಳುವಂತೆ ನಿಜವಾದ ಅಂಕಿ ಸಂಖ್ಯೆಗಳು ಅಧಿಕೃತವಾಗಿ ವರದಿಯಾದ ಸಂಖ್ಯೆಗಳ ಹತ್ತು ಪಟ್ಟು ಇರುತ್ತವೆ. ಬೆಂಗಳೂರಿನ ಮಹಿಳಾ ಸಂಸ್ಥೆಗಳು ಮಾರ್ಚ್ 8ರಂದು ಭಾಂವ್ರಿದೇವಿಗಾದ ಅನ್ಯಾಯಕ್ಕಾಗಿ ಪ್ರತಿಭಟಿಸಿದರು. ಮೇಲ್ಜಾತಿಗೆ ಸೇರಿದ ಅಪರಾಧಿಗಳು ಭಾನ್ವರಿದೇವಿಯ ಮೇಲೆ ಗುಂಪು ಅತ್ಯಾಚಾರ ನಡೆಸಿದ್ದರೂ, ರಾಜಾಸ್ತಾನದ ಉಚ್ಚನ್ಯಾಯಾಲಯವು ಅವರನ್ನು ಬಿಡುಗಡೆ ಮಾಡಿದ್ದಕ್ಕೆ ಪ್ರತಿಭಟನೆ ವ್ಯಕ್ತಪಡಿಸಿದರು. ರಾಜಕೀಯ ಪಕ್ಷಗಳಾದ ಭಾಜಪವು ಬಿಡುಗಡೆ ಹೊಂದಿದ ಲೈಂಗಿಕ ಅಪರಾಧಿಗಳನ್ನು ಸಾರ್ವಜನಿಕವಾಗಿ ಮರ್ಯಾದೆ ಮಾಡಿದುದನ್ನು ಮಹಿಳಾ ಸಂಸ್ಥೆಗಳು ಖಂಡಿಸಿವೆ ಮತ್ತು ಮೊಕದ್ದಮೆಯ ಸಾರ್ವಜನಿಕ ವಿಚಾರಣೆಯಾಗಬೇಕೆಂದು ಒತ್ತಾಯಿಸಿವೆ. ಇವೆಲ್ಲದರ ನಡುವೆ ಭಾನ್ವರಿ ದೇವಿಯ ಧೈರ್ಯ ಅಚಲವಾಗಿದೆ. ಮೇಲ್ಜಾತಿಗೆ ಸೇರಿದ ಗಂಡಸರು ಆಕೆಯ ಮೇಲೆ ನಡೆಸಿದ ದೌರ್ಜನ್ಯದ ಬಗ್ಗೆ ಭಯಭೀತಿಯಿಲ್ಲದೆ ಹೇಳಿದ್ದಾಳೆ.

ಬಾಲ್ಯವಿವಾಹಗಳು ದೇಶದ ಎಲ್ಲೆಡೆಯಲ್ಲೂ, ಎಲ್ಲ ಜನಾಂಗಗಳಲ್ಲೂ, ರಾಜಸ್ತಾನ, ಬಿಹಾರ, ಆಂಧ್ರಪ್ರದೇಶ ಹಾಗೂ ತಮಿಳುನಾಡಿನ ಎಲ್ಲಾ ಹಳ್ಳಿಗಳಲ್ಲೂ ನಡೆಯುತ್ತಲೇ ಇವೆ. ಮಾಧ್ಯಮಗಳು ಆಡಂಬರದ ಈ ಮದುವೆಗಳ ಚಿತ್ರಗಳನ್ನು, ಬೇಸತ್ತ ಹಾಗೂ ನಿಮದು ಮಕ್ಕಳ ದೊಡ್ಡ ದೊಡ್ಡ ಚಿತ್ರಗಳನ್ನು ಮುದ್ರಿಸಿದರೂ ಸರಕಾರಗಳು ಈ ಅನ್ಯಾಯದ ಚಟುವಟಿಕೆಗಳ ಬಗ್ಗೆ ಕುರುಡಾಗಿವೆ. ಹೈದರಾಬಾದಿನ ಒಬ್ಬ ಎಳೆಯ ಮುಸ್ಲಿಂ ಹುಡುಗಿ ಅಮೀಣಾನ್ನು ಹಲ್ಲಿಲ್ಲದ ಅರವತ್ತರ ಮುದುಕ ಶೇಖನಿಗೆ ಮದುವೆ ಮಾಡಿಕೊಟ್ಟದ್ದು ಇತ್ತೀಚೆಗೆ ಹೊರಬಿತ್ತು. ಈ ಘಟನೆ ಚಿಕ್ಕ ಹುಡುಗಿಯರನ್ನು ಅರಬ್ಬೀಗಳಿಗೆ ವಧುವಾಗಿ ಮಾರುತ್ತಿರುವ ಹೇಸಿಗೆಯ ಪದ್ಧತಿಯನ್ನು ಹೊರ ಹಾಕಿತು.

ಇತ್ತೀಚೆಗೆ ನಮ್ಮ ದೂರದರ್ಶನ ಕಾರ್ಯಕ್ರಮದಲ್ಲಿ ಹದಿಮೂರು ವರ್ಷದ ಕೋಲಾರದ ಹುಡುಕಿ ಮಲ್ಲಿಕಾಳನ್ನು, ಸೌದಿ ದೇಶದವನಿಗೆ ಮದುವೆ ಮಾಡಿದ್ದನ್ನು ವರದಿ ಮಾಡಿದ್ದವು. ಈ ಕೇಸು ಪೋಲೀಸರ ಗಮನಕ್ಕೆ ಬಂದದ್ದು ಅವರು ಪಾಸಪೋರ್ಟಿಗೆ ಸಂಬಂಧಿಸಿದ ಪತ್ರಗಳನ್ನು ನೋಡಿದಾಗ. ವಧು ಮತ್ತು ವರನ ವಯಸ್ಸಿನಲ್ಲಿ ಅತಿ ಹೆಚ್ಚು ಅಂತರವಿತ್ತು. 57 ವರ್ಷದ ಸೌದಿ ದೇಶದವ ಮಲ್ಲಿಕಾಳೊಂದಿಗೆ ಕೋಲಾರದಲ್ಲಿ 'ನಿಕಾ' ಮಾಡಿಕೊಂಡು ಕರ್ನಾಟಕಕ್ಕೆ ಎರಡು ಬಾರಿ ಆಗಮಿಸಿದ್ದ.

ಈ ಎರಡೂ ಸಂದರ್ಭಗಳಲ್ಲಿ ಮಲ್ಲಿಕಾಳನ್ನು ಶಿವಾಜಿನಗರದಲ್ಲಿನ ವಸತಿಗೃಹವೊಂದರ ಕೊಠಡಿಯಲ್ಲಿ ಕೂಡಿ ಹಾಕಿ ತನಗಿಂತ ನಾಲ್ಕು ಪಟ್ಟು ಕಿರಿಯದಾದ ಹುಡುಗಿಯನ್ನು ತನ್ನ ಕಾಮತೃಷೆಗೆ ಬಳಸಿಕೊಂಡಿದ್ದ. ಸೌದಿ ಅರೇಬಿಯಾಗೆ ತನ್ನನ್ನು ಹೆಂಡತಿಯಾಗಿ ಕರೆದುಕೊಂಡು ಹೋಗಲು ನಿರಾಕರಿಸಿದ ಈತನ ವಿರುದ್ಧ ಮಲ್ಲಿಕಾ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾಳೆ.

ಈ ಹೊತ್ತಿಗೆ, ನಿಮಗೆ ಆಶ್ಚರ್ಯವಾಗುತ್ತಿರಬಹುದು, ನಾನೇಕೆ ನಾನೊಬ್ಬ 'ಆಶಾವಾದಿ'ಯೆಂದು ಹೇಳಿದ್ದೆನೆಂದು. ಹೌದು ನಾನು ಆಶಾವಾದಿಯೇ. ಈ ಎಲ್ಲಾ ಮಹಿಳಾ ದೌರ್ಜನ್ಯಗಳ ಅಂಕಿ ಸಂಖ್ಯೆಗಳ ಸುರಿಮಳೆಗಳ ನಡುವೆಯೂ, ನಮ್ಮ ಸಮಾಜದಲ್ಲಿ ದೌರ್ಜನ್ಯಕ್ಕೆ ಒಳಗಾದ ಇದೇ ಮಹಿಳೆಯರಲ್ಲಿಯೇ ಅದೃಶ್ಯ ನಿಗ್ರಹ ಶಕ್ತಿ, ಅತ್ಯಾಚಾರಗಳನ್ನು ನಿಲ್ಲಿಸ ಹೊರಟ ಖಂಡಿತದ ಯತ್ನ ನಿಧಾನವಾಗಿಯಾದರೂ ಬೆಳೆಯುತ್ತಲೇ ಇದೆ.

ಮಹಿಳೆಯರು ಶತಮಾನಗಳ ದೌರ್ಜನ್ಯವನ್ನು ಇದುವರೆಗೂ 'ತಮ್ಮ ಕರ್ಮ' ಎಂದು ಬಗೆದಿದ್ದರು. ಆದರೆ ಇಂದು ಸಮಾಜದಿಂದ ನಿರ್ಲಕ್ಷ್ಯಗೊಂಡ ಗುಂಪುಗಳಿಗೆ ಸೇರಿದ ಇವರು ಈ ದೌರ್ಜನ್ಯಗಳ ವಿರುದ್ಧ ದನಿಯೆತ್ತಿದ್ದಾರೆ, ವಿರೋಧಿಸುತ್ತಿದ್ದಾರೆ. ಇತ್ತೀಚೆಗೆ ನಡೆದ ಮದ್ಯಪಾನದ ವಿರುದ್ಧ ನಡೆದ ಹೋರಾಟವು ದೇಶದಲ್ಲಿ ಮಹಿಳೆಯರು ನಡೆಸಿದ ಅತ್ಯಂತ ಯಶಸ್ವೀ ಹೋರಾಟಗಳಲ್ಲಿ ಒಂದಾಗಿದೆ. ಹಿಮಾಚಲ ಪ್ರದೇಶದಿಂದ ಆಂಧ್ರ ಪ್ರದೇಶದವರೆಗಿನ ಹೆಂಗಸರು, ಇತ್ತೀಚಿನ ವರ್ಷಗಳಲ್ಲಿ ತಮ್ಮ ಹಳ್ಳಿಗಳಲ್ಲಿ ಹೆಚ್ಚಾದ ಮಧ್ಯಪಾನ ಹಾಗೂ ಸಾರಾಯಿ ಮಾರಾಟವನ್ನು ತೀವ್ರವಾಗಿ ಪ್ರತಿಭಟಿಸಿ ಹೋರಾಟ ನಡೆಸಿದ್ದಾರೆ. ತಮ್ಮ ಹಳ್ಳಿಗಳಲ್ಲಿ ಧಾರಾಳವಾಗಿ ಸಾರಾಯಿ ಮತ್ತಿತರ ಮದ್ಯಪಾನಗಳು ದೊರೆಯುತ್ತಿರುವ ಕಾರಣದಿಂದಾಗಿ, ತಮ್ಮ ಗಂಡಸರು ಕುಡುಕರಾಗಿ ಕೌಟುಂಬಿಕ ಜೀವನವೇ ಹಾಳಾಗಿರುವುದನ್ನು ಎತ್ತಿ ತೋರಿಸಿದ್ದಾರೆ. ಆಂಧ್ರಪ್ರದೇಶದ ಹೆಂಗಸರು ಹೋರಾಟ ನಡೆಸಿ ಮದ್ಯಪಾನ ನಿರೋಧದಲ್ಲಿ ಜಯಶಾಲಿಗಳಾಗಿರುವುದು ಇಂದು ಚರಿತ್ರೆಯಾಗಿದೆ.

ಇದೊಂದು ಸಾಕ್ಷರತೆಯ ಜಾದು. ಏಕೆಂದರೆ ಈಗಷ್ಟೇ ಓದು ಬರಹ ಕಲಿತ ಹೆಂಗಸರು, 'ಸರಕಾರ ಮದ್ಯಪಾನದ ಮಾರಾಟ ನಿಲ್ಲಿಸಲಿ ಇಲ್ಲ ಎಂದರೆ ಮುಂದೆ ಬರುವ ಚುನಾವಣೆಯಲ್ಲಿ ಸೋಲಲಿ' ಎಂದು ಪಟ್ಟು ಹಾಕಿದರು. ಈ ಮಹಿಳೆಯರು ಗೆದ್ದರು. ಆಂಧ್ರಪ್ರದೇಶದಲ್ಲಿ ಮದ್ಯಪಾನ ನಿಷೇಧ ಜಾರಿಗೆ ಬಂತು. ಮದ್ಯಪಾನ ನಿಷೇಧ ಹೇಗೆ ವಿಫಲವಾಗಿದೆಯೆಂದು ಮಾಧ್ಯಮಗಳು ನಿಷ್ಠುರವಾಗಿ ಬರೆದಿದ್ದರೂ, ಈ ವಿಷಯದ ಬಗ್ಗೆ ನಾನೊಂದು ದಾಖಲೆ ಚಿತ್ರವೊಂದನ್ನು ತಯಾರಿಸಲು ಆಂಧ್ರಪ್ರದೇಶದಲ್ಲಿ ಪ್ರವಾಸ ಮಾಡಿದಾಗ ನಾನು ಕಂಡ ಸತ್ಯವೇ ಬೇರೆ. ಆ ಹಳ್ಳಿಗಳ ಹೆಂಗಸರು ತಮ್ಮ ಜೀವನ ಬದಲಾವಣೆಯಾಗಿರುವುದಾಗಿ ಹೇಳಿದರು. ಈ ನಿಷೇದಾಜ್ಞೆಗೆ ಮೊದಲು ಗಂಡ ಹೆಂಡತಿ ಕೂಡಿ 45 ರೂಪಾಯಿಗಳನ್ನು ಸಂಪಾದಿಸಿದ್ದರೆ, ಕುಡುಕ ಗಂಡ ಅದೆಲ್ಲವನ್ನೂ ಕಸಿದುಕೊಳ್ಳುತ್ತಿದ್ದ. ನಿಷೇದಾಜ್ಞೆಯ ನಂತರ ಆ 45 ರೂಪಾಯಿಗಳು ಆಹಾರದ ಮೇಲೆ ಖರ್ಚು ಮಾಡಲು ಸಿಗುತ್ತಿವೆ. ಮೊದಲಿಗೆ ಅವರುಗಳು ಬ್ಯಾಂಕುಗಳಲ್ಲಿ ಖಾತೆ ತೆರೆದರು. 'ಪಡುಪಲಕ್ಷ್ಮಿ ಯೋಜನೆ'ಯಡಿ ಹೆಂಗಸರು ಪ್ರತಿ ದಿನವೂ ಒಂದು ರೂಪಾಯಿ ಉಳಿಸಿ, ತಿಂಗಳಿಗೆ ಮೂವತ್ತು ರೂಪಾಯಿಗಳನ್ನು ಉಳಿತಾಯ ಮಾಡುತ್ತಿದ್ದಾರೆ. ನಗರದಲ್ಲಿರುವ ನಮಗಿದು ದೊಡ್ಡ ಮೊತ್ತವಲ್ಲವಾದರೂ ಈ ಬಡ ಹೆಂಗಸರಿಗೆ ಇದು ಭಾರೀ ಮೊತ್ತ. ಕರ್ನಾಟಕದ ಹಳ್ಳಿಗಳ ಹೆಂಗಸರೂ ಈ ವಿಪತ್ತಿನ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ ಮತ್ತು ಸರಕಾರವು ಮದ್ಯಪಾನ ನಿಷೇಧ ಜಾರಿಗೆ ತರಲು ಬದ್ಧವಾಗಿದ್ದರೂ ಇನ್ನೂ ಕಾರ್ಯರೂಪಕ್ಕಿಳಿಸಿಲ್ಲ. ಕುಡಿಯುವ ನೀರಿನ ಸರಬರಾಜು ಇಲ್ಲದ ಹಳ್ಳಿಗಳಲ್ಲಿ ಧಾರಾಳವಾಗಿ ಸಾರಾಯಿಯ ಸರಬರಾಜು ಏಕೆ ನಡೆದಿದೆ? ಸರಕಾರಕ್ಕೆ 800 ಕೋಟಿ ಆದಾಯ ತರಲೆಂದೇ? ನಮ್ಮ ಜನರ ಆರೋಗ್ಯ ಏನಾಗುತ್ತಿದೆ, ಹಳ್ಳಿಗಳ ಹೆಂಗಸರು ಮತ್ತು ಮಕ್ಕಳು ಮತ್ತಷ್ಟು ಬಡವರಾಗುತ್ತಿದ್ದಾರೆ. ಮದ್ಯಪಾನವು ಹಳ್ಳಿಗಳ ಸಮಸ್ಯೆ ಮಾತ್ರವೇ ಎಂದು ಹೇಳುವ ಪರಿಪಾಠ ಇದ್ದರೂ, ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿನ ಕಾರ್ಖಾನೆ ಹಾಗೂ ಆಫೀಸುಗಳಲ್ಲಿ ನಡೆಸಿದ ಸಮೀಕ್ಷೆಗಳು ತಿಳಿಸುವುದೇನೆಂದರೆ, ಇಲ್ಲಿಯ ಗಂಡಸರಲ್ಲು ಅತಿ ಹೆಚ್ಚಿನ ಮದ್ಯಪಾನದ ಸಮಸ್ಯೆಯನ್ನು ಬಯಲಿಗೆ ತಂದಿದ್ದಾರೆ, ಮದ್ಯಪಾನದ ವಿರುದ್ಧ ಹೋರಾಟ ದೇಶದ ಎಲ್ಲೆಡೆಯಲ್ಲಿಯೂ ಮುಂದುವರೆದಿದೆ.

ತಮ್ಮ ಸಮಾನ ಸಮಸ್ಯೆಗಳನ್ನು ಗುರುತಿಸಿಕೊಂಡು ದೇಶದಾದ್ಯಂತ ಒಗ್ಗಟ್ಟಾಗುತ್ತಿರುವ ಮಹಿಳೆಯರನ್ನು ಕುರಿತು ನಾವು ದೂರದರ್ಶನದಲ್ಲಿ ಒಂದು ಕಾರ್ಯಕ್ರಮವನ್ನು ಮಾಡಿದೆವು. ಇತ್ತೀಚೆಗೆ ಪುರಿಯ ಜಗನ್ನಾಥ ದೇವಾಲಯದಲ್ಲಿ ದೇವದಾಸಿ ಪದ್ಧತಿಯನ್ನು ಪುನರುಜ್ಜೀವಿಸುವ ಪ್ರಯತ್ನ ಶುರುವಾಗಿತ್ತು. ದೇವಸ್ಥಾನದ ಪೂಜೆಯ ಅಂಗವಾಗಿ ಇದು ಅನಿವಾರ್ಯ ಎಂದು ನೂರಾರು ಸಮರ್ಥನೆಗಳನ್ನು ಕೊಡಲಾಗಿತ್ತು. ದಕ್ಷಿಣ ಭಾರತದಲ್ಲಿ ದೇವದಾಸಿ ಪದ್ಧತಿಯ ವಿರುದ್ಧ ಹೋರಾಡಿ ಶಾಸನ ಹೊರಡಿಸುವಲ್ಲಿ ಯಶಸ್ವಿಯಾದ ಮಹಿಳಾ ಸಂಸ್ಥೆಗಳಿಗೆ ಪುರಿಯಲ್ಲಿ ಇಂತಹ ಪದ್ಧತಿಯನ್ನು ಪುನಶ್ಚೈತನ್ಯಗೊಳಿಸುವ ಯತ್ನ ಆಘಾತವನ್ನುಂಟು ಮಾಡಿತು. ಧರ್ಮದ ಹೆಸರಿನಲ್ಲಿ ಬಡ ಕುಟುಂಬಗಳಿಗೆ ಸೇರಿದ ಅನೇಕ ಹುಡುಗಿಯರನ್ನು ದೌರ್ಜನ್ಯ, ಅತ್ಯಾಚಾರಕ್ಕೆ ಬಲಿ ಕೊಡುವಂತಹ ಪದ್ದತಿಯನ್ನು ಮತ್ತೆ ತರುವ ಯತ್ನ ತೀವ್ರವಾಗಿ ಖಂಡನೆಗೆ ಗುರಿಯಾಯಿತು. ಈ ದೇವದಾಸಿ ಪದ್ಧತಿಯ ಚಿಕ್ಕ ಹುಡುಗಿಯರನ್ನು ಹಿಡಿದು ಬೆಂಗಳೂರು ಬಾಂಬೆಗಳಲ್ಲಿ ವೇಶ್ಯಾವಾಟಿಕೆಗೆ ತಳ್ಳುವ ಸಾಧನವಾಗಿದೆ ಎಂದು ತನಿಖೆಗಳಿಂದ ಕಂಡು ಬಂದಿದೆ.

ಎಂಭತ್ತರ ದಶಕದಲ್ಲಿ ಜಾರಿಗೆ ಬಂದ ದೇವದಾಸಿ ಪದ್ಧತಿ ನಿಷೇಧ ಕಾಯಿದೆಯ ನಂತರ, ಸರಕಾರ ಮತ್ತು ಸ್ವಯಂಸಂಘಗಳ ಸಹಾಯದಿಂದ ಪುನರ್ವಸತಿಗೊಂಡ ದೇವದಾಸಿಯರನ್ನು

ಭೇಟಿಮಾಡಲು ನಾನು ಬೆಳಗಾಂಗೆ ಹೋಗಿದ್ದೆ. ನನಗೆ ಅಚ್ಚರಿಯಾದದ್ದೆಂದರೆ, ಬಹಳಷ್ಟು ಸಂಖ್ಯೆಯಲ್ಲಿ ಕರ್ನಾಟಕದ ಈ ದೇವದಾಸಿಯರು ಪುರಿ ದೇವಸ್ಥಾನದಲ್ಲಿ ದೇವದಾಸಿ ಪದ್ಧತಿಯನ್ನು ಮರಳಿ ತರುವ ವಿರುದ್ಧ ಸಾರ್ವಜನಿಕವಾಗಿ ಪ್ರತಿಭಟಿಸಿದ್ದರು. ನ್ಯಾಯಾಲಯದಲ್ಲಿ ದಾವೆ ಕೂಡಾ ಹೂಡಿದ್ದರು. ಹಗ್ಗ ಮಾಡುವುದು, ಯಂತ್ರದ ಮಗ್ಗಗಳನ್ನು ನಡೆಸುವುದು, ದಿನಸಿ ಅಂಗಡಿಗಳು ಇತ್ಯಾದಿ ಅವಲಂಬಿಸಿ, ಬದಲಾದ ಜೀವನ ನಡೆಸುವ ಇವರು ಪುರಿಯ ಚಟುವಟಿಕೆಯನ್ನು ಖಂಡಿಸಿದ್ದೇ ಅಲ್ಲದೆ, ದೇವದಾಸಿ ಪದ್ಧತಿಯ ವಿರುದ್ಧದ ಶಾಸನವು ಬರೀ ದಕ್ಷಿಣ ಭಾರತಕ್ಕೆ ಮಾತ್ರ ಮೀಸಲಾಗಿರುವುದಕ್ಕೆ ಆಶ್ಚರ್ಯ ಪಟ್ಟರು. ನಗರವಾಸಿ ಸ್ತ್ರೀವಾದಿಗಳು ಪಂಚತಾರಾ ವಾತಾವರಣದಲ್ಲಿ ಕಾಫಿಯೊಂದಿಗೆ ಮಾತಾಡಿ ಮುಗಿಸುವ 'ಸಂಘಟನೆ', ಇಲ್ಲಿ ಈ ಬೆಳಗಾಂನಲ್ಲಿ ವಾಸ್ತವವಾಗಿತ್ತು. ಈ ಘಟನೆಯನ್ನು ನಮ್ಮ ಸುದ್ದಿ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸುದ್ದಿಯಾಗಿ ನಾವು ಬಿಂಬಿಸಿದೆವು.

ಮತ್ತೊಬ್ಬ ದಿಟ್ಟೆಯ ಕತೆಯಿದೆ. ಬಂಗಾರಪೇಟೆಯ 22 ವರ್ಷದ ಅರ್ಚನಾ ತನ್ನ ಪತಿ ಡಾ|| ಜಯಕೃಷ್ಣ ಅಂಬತಿ - ಪ್ರಪಂಚದ ಅತ್ಯಂತ ಕಿರಿಯ ಡಾಕ್ಟರಾದ ಡಾ|| ಬಾಲಮುರಳಿ ಕೃಷ್ಣ ಅಂಬತಿಯ ಸೋದರ - ಮತ್ತು ಆತನ ತಾಯ್ತಂದೆಯರು ವಿರುದ್ಧ ಮೊಕದ್ದಮೆ ಹೂಡಿದ್ದಾಳೆ. ವಿಜಯವಾಡದಲ್ಲಿ ಅಂಬತಿಯವರನ್ನು ಬಂಧಿಸಿ, ಕೋಲಾರದ ನ್ಯಾಯಾಧೀಶರೆದುರು ಹಾಜರು ಪಡಿಸಿದ್ದು ಇಂದು ರೋಚಕ ಕತೆಯಾಗಿದೆ. ಅರ್ಚನಾ ಈಗ ತನ್ನ ತಾಯ್ತಂದೆಯರೊಂದಿಗೆ ಬಂಗಾರಪೇಟೆಯಲ್ಲಿ ಅಂಬತಿಗಳ ವಿರುದ್ಧ ನ್ಯಾಯಾಲಯದಲ್ಲಿ ಹೋರಾಟ ನಡೆಸಿದ್ದಾಳೆ. ಅವಳು ಕಾಲೇಜಿಗೆ ಮತ್ತೆ ಸೇರಿ ನ್ಯಾಯವಾದಿಯಾಗಲು ವಿದ್ಯಾಭ್ಯಾಸ ಮುಂದುವರೆಸಿದ್ದಾಳೆ.

ದಿಟ್ಟತನದ ಒಂಟಿ ಪ್ರತಿಭಟನೆಗಳ ಜೊತೆ ಸ್ಥೈರ್ಯಪೂರ್ವಕ ಸಾರ್ವಜನಿಕ ಪ್ರತಿಭಟನೆಗಳ ಉದಾಹರಣೆಗಳು ನಮ್ಮೆದುರಿಗಿವೆ. ವಿಶ್ವಸುಂದರಿ ಸ್ಪರ್ಧೆ ಬೆಂಗಳೂರಿನಲ್ಲಿ ನಡೆಸುವಾಗ, ಇಲ್ಲಿ ಮಹಿಳಾಪರ ಎಡ ಹಾಗೂ ಬಲ ಪಂಥೀಯರು ಒಟ್ಟಾಗಿ ಒಂದೇ ವೇದಿಕೆಯ ಮೇಲೆ ಹೆಣ್ಣಿನ ಸೌಂದರ್ಯಕ್ಕೆ ಲೈಂಗಿಕ ಕಲ್ಪನೆಗಳ ಒತ್ತು ಕೊಟ್ಟದ್ದನ್ನು ತೀವ್ರವಾಗಿ ಪ್ರತಿಭಟಿಸಿದ್ದು ಒಂದು ಬಗೆಯಲ್ಲಿ ಚರಿತ್ರೆ ನಿರ್ಮಿಸಿದೆ. ಅವರ ಅನಿಸಿಕೆಗಳಲ್ಲಿ, ಅಭಿಪ್ರಾಯಗಳಲ್ಲಿ ವ್ಯತ್ಯಾಸವಿದ್ದರೂ, ಈ ಎಲ್ಲ ಸಂಘಟನೆಗಳೂ, ಈ ಸೌಂದರ್ಯ ಸ್ಪರ್ಧೆಗಳ ಸಮಂಜಸತೆಯನ್ನು ಪ್ರಶ್ನಿಸಿದವು, ಅದರಲ್ಲಿ ರಾಜ್ಯದ ಪಾಲುದಾರಿಕೆಯನ್ನು ಖಂಡಿಸಿದವು. ಮಹಿಳಾಪರ ಹೋರಾಟ ನಿರಂತರವಾಗಿ ಸಾಗಿದೆ.

ಅನು : ಸಂಪಿಗೆ ಪುಷ್ಪ

ಪುರುಷ ಪೋಲೀಸ್ ಠಾಣೆಯ ಮುಖ್ಯಸ್ಥೆ - ಸಾರಾ ಅಲೆಕ್ಸಾಂಡರ್

ಏನೆಲ್ಲ ರಂಗದಲ್ಲಿ ಚರಿತ್ರೆ ನಿರ್ಮಿಸುತ್ತಿದ್ದಾರೆ ನಮ್ಮ ಭಾರತದ ಮಹಿಳೆಯರು. ಇದೋ ಪೋಲೀಸ್ ವಿಭಾಗದಲ್ಲೂ ಮಹಿಳೆಯರು ಮುನ್ನಡೆಯುತ್ತಿದ್ದಾರೆ. ಕೇರಳದ ಚೆಮನ್ನಡ್ ಪೋಲೀಸ್ ಠಾಣೆಯ ಮುಖ್ಯಸ್ಥೆ ಸಬ್ ಇನ್ಸ್‌ಪೆಕ್ಟರ್ ಪಿ. ಸಾರಾ ಅಲೆಕ್ಸಾಂಡರ್. ಈಕೆ ರಾಜ್ಯ ಮತ್ತು ರಾಷ್ಟ್ರ ಪೋಲೀಸ್ ಪದಕ ಪುರಸ್ಕೃತೆ. ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಒಬ್ಬ ಮಹಿಳೆ, ಬರೀ ಪುರುಷರೇ ಇರುವ ಠಾಣೆಯ ಮುಖ್ಯಸ್ಥಳಾಗಿದ್ದಾಳೆ. 34 ಜನ ಪೋಲೀಸ್ ಪೇದೆಗಳಿರುವ ಈ ಠಾಣೆಗೆ ಸಾರಾ ಮುಖ್ಯಸ್ಥರಾಗಿ ಇಂದಿಗೆ ಒಂದು ವರ್ಷ.

ಸುಲ್ತಾನ್ ಭತೇರಿಯಲ್ಲಿ ಹುಟ್ಟಿದ ಸಾರಾ, 1974ರಲ್ಲಿ ತಮ್ಮ 23ನೇ ವಯಸ್ಸಿನಲ್ಲಿ ದುಡಿಯಲು ಹೊರಟರು. ಪೋಲೀಸ್ ಪೇದೆಯಾಗಿ ಕೆಲಸಕ್ಕೆ ಸೇರಿದರು. ಪೋಲೀಸ್ ಕೆಲಸಕ್ಕೆ ಸೇರಲು ಮನೆಯವರ ಬಲು ವಿರೋಧವಿತ್ತು, ಅತ್ಯಂತ ಕಠಿಣ ತರಪೇತು ಸಮಯವನ್ನು ಮುಗಿಸಿದರು. 1997ರಲ್ಲಿ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಬಡ್ತಿ ಪಡೆದರು. ಇಂದು ತಾವು ಮುಖ್ಯಸ್ಥರಾಗಿರುವ ಪೋಲೀಸ್ ಹುದ್ದೆಗೆ ಬಡ್ತಿ ಪಡೆದರು. ಇಂದು ತಾವು ಮುಖ್ಯಸ್ಥರಾಗಿರುವ ಪೋಲೀಸ್ ಠಾಣೆಯ ವಾತಾವರಣವನ್ನೇ ಸಾರಾ ಬದಲಿಸಿದ್ದಾರೆ. ಸ್ಥಳೀಯ ಜನ ಈಕೆಯ ಬಗ್ಗೆ ಪ್ರೀತಿ ಗೌರವ ಹೊಂದಿರುವುದು ಮಾತ್ರವಲ್ಲ, ಈಕೆ ಕೈಕೆಳಗೆ ದುಡಿವವರಿಗೂ ಅಚ್ಚುಮೆಚ್ಚಿನ ಅಧಿಕಾರಿಯಾಗಿದ್ದಾರೆ.

ಪುರುಷರೇ ಮುಂದು !

ತಮ್ಮ ಸ್ತನದ ಗಾತ್ರ ಸಣ್ಣದೆಂದೋ, ದೊಡ್ಡದೆಂದೋ ಮಹಿಳೆಯರು ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಿಕೊಳ್ಳುವುದನ್ನು ನೋಡಿದ್ದೇವೆ. ಹೆಂಗಸರಿಗೆ ಅಳತೆ ಆಕಾರ ಅಲಂಕಾರದ್ದೇ ಗೀಳು ಎಂದು ಭಾವಿಸುತ್ತೀರಾ ಅಲ್ಲವೆ, ಹಾಗೇನೂ ಇಲ್ಲ ಸ್ವಾಮಿ, ತಮ್ಮ ಎದೆಯ ಬಗ್ಗೆ ಅತಿ ಕಾಳಜಿ ವಹಿಸುತ್ತಿರುವವರು ಗಂಡಸರು ! ತಮ್ಮ ಸ್ತನದ ಗಾತ್ರವನ್ನು ಸಣ್ಣದು ಮಾಡಿಸಿಕೊಳ್ಳಲು, ಅಂಗಿ ಕಳಚಿ ತೆರೆದು ತೋರಿಸಬಲ್ಲ ಅಂದವಾದ ಆಕಾರಕ್ಕೆ ಬದಲಿಸಿಕೊಳ್ಳಲು, ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವ ಗಂಡಸರ ಸಂಖ್ಯೆ ಹೆಂಗಸರಿಗಿಂತ ಹೆಚ್ಚಿದೆ! ಹೆಂಗಸಿನಂತೆ ಮೂಡಿದ ಎದೆಯ ಭಾಗದಿಂದಾಗಿ ಬಿಗಿಯಾದ ಉಡುಪು ತೊಡಲಾಗುವುದಿಲ್ಲ, ಈಜಲು ಅಂಗಿ ಬಿಚ್ಚುವಂತಿಲ್ಲ ಎಂದು ಬಾಧೆ ಪಡುವ ಹುಡುಗರು ಶಸ್ತ್ರಚಿಕಿತ್ಸೆಗೆ ನುಗ್ಗುತ್ತಿದ್ದಾರೆ. ಕಳೆದ ವರ್ಷ ಚೆನ್ನಾಯಿಯ ಅಪೊಲೊ ಆಸ್ಪತ್ರೆಯಲ್ಲಿ ಸ್ತನದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಮಹಿಳೆಯ ಸಂಖ್ಯೆ 12 ಇದ್ದರೆ, ಪುರುಷರ ಸಂಖ್ಯೆ 24 ಇತ್ತು !

ಖಳನಾಯಕ, ನಾಯಕ ಮತ್ತು ಇದೀಗ ರಾಜಕಾರಣಿಯಾಗಿರುವ ಶತ್ರುಘ್ನ ಸಿನ್ಹ ಉವಾಚ 'ಹೆಣ್ಣೊಬ್ಬಳನ್ನು ಮೆಚ್ಚುವಾಗ ಆಕೆಯ ಚರಿತ್ರೆ ಬಗ್ಗೆ ಯಾರು ನೋಡುತ್ತಾರೆ, ಆಕೆಯ ಭೂಗೋಳ ಮುಖ್ಯ ಅಷ್ಟೆ'. ನಮ್ಮ ರಾಜಕಾರಣಿಗಳ ಚರಿತ್ರೆ, ಭೂಗೋಳದ ಜ್ಞಾನದ ಮಟ್ಟ ಎಷ್ಟೆಂದು ಈಗ ಅರ್ಥವಾಯಿತು ತಾನೆ !

ಮುಟ್ಟು ಮೈಲಿಗೆಗಳು ಇವರ ದಿನನಿತ್ಯದ ಮಾತು ಮತ್ತು ಬದುಕಿನ ವಿಷಯಗಳಾಗಿದ್ದವು. ಇಂದಿನ ವಿದ್ಯಾವಂತ ಮಹಿಳೆಯರೂ ತಮ್ಮ ಸಮಸ್ಯೆಗಳನ್ನು ತಮ್ಮ ಆಪ್ತರಲ್ಲಿ ಧಾರಾಳವಾಗಿ ಹೇಳಿಕೊಳ್ಳುತ್ತಾರೆ, ಹಂಚಿಕೊಳ್ಳುತ್ತಾರೆ, ತೊಂದರೆ ಎನಿಸಿದಾಗ ವೈದ್ಯರಿಗೆ ಭೇಟಿ ನೀಡುತ್ತಾರೆ. ನಿಜ, ಹೆಣ್ಣಿನ ಲೈಂಗಿಕತೆ ಇನ್ನೂ ಸ್ವೀಕೃತವಾಗದ, ಕೆಂಡ ಮುಚ್ಚಿದ ವಿಷಯವಾಗಿರಬಹುದು. ಆದರೆ ಲೈಂಗಿಕತೆ ಅತ್ಯಂತ ಸೂಕ್ಷ್ಮವಾದ ವಿಷಯ. ಲೈಂಗಿಕ ಸಂಕೋಚಗಳಿಂದ ಹೆಣ್ಣು ಮುಕ್ತಳಾಗಲು ಆರೋಗ್ಯಕರ ಪರಿಸರದ ನಿರ್ಮಾಣ ಮನೆ ಮತ್ತು ಸುತ್ತಲು ಸಮಾಜದಲ್ಲಿ ಆಗಬೇಕು. ಅದು ಕೇವಲ ಗುಪ್ತಾಂಗವನ್ನು ಕುರಿತು ಗಟ್ಟಿಯಾಗಿ ಪ್ರಾಕೃತ ಪದಗಳಲ್ಲಿ ಚೀರುವುದರಿಂದ ಆಗುವಂತಹುದಲ್ಲ.

ನಿರ್ಮಾಪಕಿ ಮತ್ತು ನಿರ್ದೇಶಕರಾದ ದೀಪ್ತಿ ಮತ್ತು ರುಚಿಕಾ 'ವೆಜೈನಾ ನಮ್ಮ ಅನಾಟಮಿಕಲ್ ಐಡೆಂಟಿಟಿ. ಅದರೊಡನೆ ಸುಖ ಮತ್ತು ಲೈಂಗಿಕತೆ ಜೊತೆಗೂಡಿದೆ. 'ಲಿಬರೇಟೆಡ್' ಎಂದು ಹೇಳಿಕೊಳ್ಳುವ ಮಹಿಳೆಯರಿಗೂ ಇದನ್ನು ಸಂಭಾಳಿಸಲಾಗಿಲ್ಲ 'ಲಿಬರೇಷನ್ ಸಾಧ್ಯವೆ? ನಿಜ ಹೆಣ್ಣು ಮಕ್ಕಳು ಲೈಂಗಿಕತೆಯ ಬಗ್ಗೆ, ಮಕ್ಕಳಾಗದಾಗ ತಮ್ಮ ಪತಿಯ ಕೊರತೆಯ ಬಗ್ಗೆ ಮಾತನಾಡಲು ಹಿಂಜರಿಯುತ್ತಾರೆ. ಅವು ಕೇವಲ ವೆಜೈನಾ ಎಂಬ ಒಂದು ಅವಯವಕ್ಕೆ ಮೀಸಲಾದ ಸಮಸ್ಯೆಗಳಲ್ಲ, ಇಡೀ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನಕ್ಕೆಸಂಬಂಧಿಸಿದ, ಸಾಮಾಜಿಕ ಪಿಡುಗಿಗೆ ಸಂಬಂಧಿಸಿದ ಸಮಸ್ಯೆ. ಹೆಣ್ಣು ಮುಖ್ಯವಾದಾಗ, ಆಕೆಯ ಇಡೀ ದೇಹ, ಮನಸ್ಸು, ಮಿದುಳು ಮುಖ್ಯವಾಗುತ್ತದೆ. ಆಕೆಯ ಒಂದು ಜನನೇಂದ್ರಿಯದ ಭಾಗದಲ್ಲಿ ಸ್ತ್ರೀ ಸ್ವಾತಂತ್ರ ಅಡಗಿಲ್ಲ.

ಅಂತೂ ಈ ನಾಟಕ ಎಷ್ಟು ಬಾರಿ ಪ್ರದರ್ಶಿತವಾಯಿತೋ, ಎಷ್ಟು ಜನ ನೋಡಿದರೋ ಗೊತ್ತಿಲ್ಲ, ಆದರೆ ಊರೆಲ್ಲ ಮಾತಾಗುವಷ್ಟು ಪ್ರಸಿದ್ಧವಾಯಿತು.

★

ಸುದ್ದಿ ಸ್ವಾರಸ್ಯ

ಸ್ಪೇನ್ ದೇಶದ ಐಷಾರಾಮದ ಪ್ರವಾಸಿ ರಿಸಾರ್ಟ್ ಒಂದರಲ್ಲಿ, ಇಮಾಮ್ ಮೊಹಮದ್ ಕಮಲ್, ಗಂಡಂದಿರಿಗೆ ತಮ್ಮ ಹೆಂಡತಿಯರನ್ನು ಹಾದಿಗೆ ತರಲು ಸಲಹೆ ಕೊಟ್ಟಿದ್ದಾರೆ. ಸಲಹೆ ಏನು ಗೊತ್ತೆ - 'ಹೆಂಡತಿಯನ್ನು ಬಡಿಯುವಾಗ ಸಣ್ಣ ಕಡ್ಡಿ ಉಪಯೋಗಿಸಿ, ಕೈ ಮತ್ತು ಕಾಲುಗಳ ಮೇಲೆ ಹೊಡೆಯಿರಿ, ಇದರಿಂದ ಗುರುತುಗಳು ಕಾಣುವುದಿಲ್ಲ'. ನೀವು ಸಿಕ್ಕಿ ಹಾಕಿಕೊಳ್ಳೊದು ಇಲ್ಲ ಎಂದಿರಬೇಕು !

ನ್ಯಾಯದ ಹಾದಿ ಬಲು ದೂರ

32 ವರ್ಷದ ಪರ್ವೀನ್ ಕೌಸರ್ ಪಿ.ಒ.ಕೆ - ಪಾಕಿಸ್ತಾನ ಆವರಿಸಿರುವ ಕಾಶ್ಮೀರದಲ್ಲಿದ್ದವಳು. ಹೊಸದಾಗಿ ಮದುವೆಯಾದ ಈ ಮಹಿಳೆ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳು. ಪಂಡೋರಿ ದರಿಯಾ ನದಿಗೆ ಧುಮುಕಿದಳು. ಆದರೆ ಅವಳ ಅದೃಷ್ಟಕ್ಕೋ, ದುರದೃಷ್ಟಕ್ಕೋ ಸಾವು ಸುಲಭವಿರಲಿಲ್ಲ, ನದಿಯಲ್ಲಿ ಬಿದ್ದ ಪರ್ವೀನಳನ್ನು ಹರಿದ ನೀರು ಕೊಚ್ಚಿ ತಂದು ಭಾರತದ ಗಡಿಯೊಳಕ್ಕೆ ಬಿಟ್ಟಿತು. ಇಲ್ಲಿಯ ಗಡಿ ಭದ್ರತಾ ಪಡೆ ಆಕೆಯನ್ನು ಆಸ್ಪತ್ರೆಗೆ ಒಯ್ಯಿತು. ಭೂಸೇನೆಯ ಅಧಿಕಾರಿಗಳು ವಿಚಾರಣೆ ಮಾಡಿ, ಆಕೆ ಗೂಢಚರಳಲ್ಲ ಎಂದು ಖಾತ್ರಿಯಾದಾಗ, ಆಕೆಯನ್ನು 'ಪೂಂಚ್ ಪ್ರದೇಶ'ದ ಪೋಲೀಸರ ಕೈಗೆ ಒಪ್ಪಿಸಿದರು. ಪೋಲೀಸರು ಅನಧಿಕೃತವಾಗಿ ದೇಶದ ಒಳಗೆ ನುಗ್ಗಿದ ಅಪರಾಧಕ್ಕೆ ಈಕೆಯನ್ನು ದಾಖಲು ಮಾಡಿಕೊಂಡರು, 1995ರಲ್ಲಿ ಈಕೆಗೆ ಹದಿನೈದು ತಿಂಗಳ ಜೈಲು ವಾಸದ ಶಿಕ್ಷೆ ವಿಧಿಸಲಾಯಿತು.

ಜಿಲ್ಲೆಯ ಜೈಲಿನಲ್ಲಿದ್ದ ಪರ್ವೀನಳ ಮೇಲೆ ಜೈಲಿನ ವಾರ್ಡನ್ ಮೊಹಮದ್ ದಿನ್ ಅತ್ಯಾಚಾರ ಮಾಡಿದ. ಇದರ ಫಲವಾಗಿ ಪರ್ವೀನ್ ಗರ್ಭಿಣಿಯಾದಳು. ಗರ್ಭಪಾತ ಮಾಡಿಸಿಕೊಳ್ಳುವಂತೆ ಸಲಹೆ ಬಂದಿತು. ಪರ್ವೀನ್ ಮನಸೊಪ್ಪಲಿಲ್ಲ. 1997ರಂದು ಪರ್ವೀನ್‌ಗೆ ಹೆಣ್ಣು ಮಗು ಜನಿಸಿತು. ಜೈಲಿನ ವಾರ್ಡನ್ ಮೇಲೆ ಕೇಸ್ ಹಾಕಿದರೂ, ಮೊದಲು ತನ್ನ ಕೃತ್ಯವನ್ನು ಒಪ್ಪಿಕೊಂಡವ, ಕೋರ್ಟಿನಲ್ಲಿ ತಾನು ಅತ್ಯಾಚಾರ ಮಾಡಿಲ್ಲ ಎಂದೇ ಸಾಧಿಸಿದ. ಅಪರಾಧಿಗೆ ಬದಲು, ಅತ್ಯಾಚಾರಕ್ಕೆ ಬಲಿಯಾದ ಪರ್ವೀನಳನ್ನು ಮತ್ತೆ ಜೈಲಿಗೆ ಕಳುಹಿಸಿದರು. ಇಂತಹ ಸ್ಥಿತಿಯಲ್ಲಿ ನ್ಯಾಯವಾದಿ ಎ.ಕೆ. ಸಹನಿ ಒಂದು 'ಪಬ್ಲಿಕ್ ಇಂಟರೆಸ್ಟ್ ಕೇಸು' ಹಾಕಿ, 'ಆಕೆ 15 ತಿಂಗಳ ಜೈಲುವಾಸದ ಶಿಕ್ಷೆ ಮುಗಿಸಿದ್ದರೂ, ಆಕೆಯನ್ನು ಜೈಲಿನಲ್ಲಿ ಇಟ್ಟಿರುವುದು ಕಾನೂನುಬಾಹಿರ ಕ್ರಿಯೆಯಾಗಿದೆ' ಎಂದು ನ್ಯಾಯಾಲಯದ ಗಮನ ಸೆಳೆದರು. ಇದೀಗ ಇದೇ ಆಗಸ್ಟ್ ತಿಂಗಳು ನ್ಯಾಯಾಧೀಶರಾದ ಟಿ. ಎಸ್. ದೋಬಿಯಾ ಮತ್ತು ಎಸ್.ಕೆ. ಗುಪ್ತಾ 'ಪರ್ವೀನ್ ಅದಾಗಲೇ ತನ್ನ ಶಿಕ್ಷೆಯನ್ನು ಅನುಭವಿಸಿದ್ದಾಳೆ. ಆಕೆಯ ಮಗು ತನ್ನ ಯಾವುದೇ ತಪ್ಪಿಲ್ಲದೆ ಜೈಲಿನಲ್ಲಿ ಉಳಿದಿದೆ. ಮಗುವಿಗೆ ಸ್ವತಂತ್ರ ಬದುಕಿನ ಹಕ್ಕಿದೆ' ಎಂದು ಹೇಳಿ ಗಮನಾರ್ಹ ತೀರ್ಪಿತ್ತರು. ಅಷ್ಟಲ್ಲದೆ ಸರಕಾರ ಮಗುವಿಗೆ ಮೂರು ಲಕ್ಷ ರೂಪಾಯಿ ಪರಿಹಾರ ನೀಡಬೇಕೆಂದು, ಆಕೆ ಭಾರತದಲ್ಲಿ ಇರುವಷ್ಟು ದಿನ ಸರಕಾರಿ ವಸತಿ ನೀಡಬೇಕೆಂದೂ ನಿರ್ದೇಶಿಸಿದೆ. ಜೈಲು ವಾರ್ಡನ್ ತಪ್ಪಿತಸ್ಥನೆಂದು ಸಾಬೀತಾದರೆ ಈ ಮೂರು ಲಕ್ಷವನ್ನು ಸರಕಾರ ಅವನಿಂದ ವಸೂಲಿ ಮಾಡಬೇಕೆಂದೂ ತಿಳಿಸಿದೆ. ಆತನ ಕೇಸಿನ್ನೂ ಮುಕ್ತಾಯವಾಗಿಲ್ಲ.

ಒಂದು ಕಾಲಕ್ಕೆ ತಂದೆತನ ಸಾಬೀತಾಗಲಾರದ ವಿಷಯವಾಗಿತ್ತು. ಮಹಿಳೆಯರ ಅದೃಷ್ಟಕ್ಕೆ ಎಂಬತ್ತರ ದಶಕದಲ್ಲಿ ಡಿ.ಎನ್.ಎ. ಬೆರಳಚ್ಚು ತಂತ್ರ ಫೊರೆನ್ಸಿಕ್ ಸಲಕರಣೆಯಾಗಿ ಒದಗಿ ಬಂದು ಅತ್ಯಾಚಾರಿಯ ಪತ್ತೆಗೆ, ತಂದೆತನದ ಸಾಬೀತಿಗೆ ಸುಲಭ ಸಾಧನವಾಯಿತು. ಆದರೆ ವಿಜ್ಞಾನ, ತಂತ್ರಜ್ಞಾನದ ಮುನ್ನಡೆಯಿಂದಲೇ ನ್ಯಾಯ ದೊರೆಯಲು ಸಾಧ್ಯವಿಲ್ಲ. ಆ ವಿಜ್ಞಾನದ ಲಾಭವನ್ನು ಸರಿಯಾದ ಸಮಯಕ್ಕೆ ಸರಿಯಾದ ರೀತಿಯಲ್ಲಿ ಬಳಸುವಂತಾಗಬೇಕು. ನ್ಯಾಯದ ಹಾದಿ ಎಷ್ಟು ದೂರವಿದೆ ಎಂದು ಅಚ್ಚರಿಯಾಗುತ್ತದೆ. ಮಗು ಹುಟ್ಟಿದ್ದು ಐದು ವರ್ಷಗಳ ಹಿಂದೆ. ಡಿ.ಎನ್.ಎ. ಬೆರಳಚ್ಚು ಯಂತ್ರ ಅದಾಗಲೇ ನಮ್ಮ ದೇಶದಲ್ಲಿ ಹಳತಾಗಿತ್ತು, ಫೊರೆನ್ಸಿಕ್ ತಂತ್ರವಾಗಿ ಸಾಕಷ್ಟು ಪ್ರಚಲಿತವಿತ್ತು. ಜೈಲು ವಾರ್ಡನನ ಅತ್ಯಾಚಾರವನ್ನು ಡಿ.ಎನ್.ಎ. ಪರೀಕ್ಷೆಯಿಂದ ಸಾಬೀತು ಪಡಿಸಲು ಇಷ್ಟು ವರ್ಷಗಳು ಬೇಕೆ? ವಿಜ್ಞಾನ ತರುವ ಅನುಕೂಲಗಳು ಜನಸಾಮಾನ್ಯರನ್ನು ತಲುಪಲು ಇಷ್ಟು ತಡವಾಗುವುದೇಕೆ?

ವಿದ್ಯುತ್ ಅದಾಲತ್

ಬಸವಳಿದ ಗ್ರಾಹಕನಿಗೆ ತಂಪೆರೆಯುವ ಹೊಸ ಕಲ್ಪನೆ

ವಿದ್ಯುತ್ ಅದಾಲತ್ : ಹಾಗೆಂದರೇನು ?

ಆಡಳಿತದಲ್ಲಿ ಪಾರದರ್ಶಕತೆ ತೋರುವುದು ಮತ್ತು ಗ್ರಾಹಕನ ಅಹವಾಲಿಗೆ ಪರಿಹಾರ ಒದಗಿಸಿ ಅವನಿಗೆ ಅತ್ಯುತ್ತಮ ಸೇವೆ ಲಭಿಸುವಂತೆ ಮಾಡುವುದು ಸರ್ಕಾರದ ಗುರಿ.

ಅದಕ್ಕಾಗಿ ಒಂದು ಶಾಶ್ವತ ಪರಿಹಾರೋಪಾಯ ರೂಪಿಸಲಾಗಿದೆ. ವಿದ್ಯುತ್ ಕ್ಷೇತ್ರದಲ್ಲೊಂದು ಹೊಸ ಪರಿಕಲ್ಪನೆ ''ಜಿಲ್ಲಾ ವಿದ್ಯುತ್ ಅದಾಲತ್'' ನ ಸ್ಥಾಪನೆ, ಗ್ರಾಹಕರಿಗೆ ಸಲ್ಲಬೇಕಾದ ಸೇವೆ ಕ್ಲುಪ್ತ ಕಾಲದಲ್ಲಿ ಸಿಗುವಂತೆ ಮಾಡುವುದು ಇದರ ಉದ್ದೇಶ.

ವಿದ್ಯುತ್ ಅದಾಲತ್‌ನ ರಚನಾ ಸ್ವರೂಪ ಮತ್ತು ಅದರ ಕಾರ್ಯ ಉದ್ದೇಶ :-

ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ವಿದ್ಯುತ್ ಅದಾಲತ್‌ಗಳಿರುತ್ತವೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ವಿದ್ಯುತ್ ಅದಾಲತ್‌ನ ಅಧ್ಯಕ್ಷರು, ಅದಲಾತ್‌ನಲ್ಲಿ ಆಯಾ ಜಿಲ್ಲಾ ಪಂಚಾಯ್ತಿಯ ಆಡಳಿತಾಧಿಕಾರಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಜಿಲ್ಲಾ ಮಟ್ಟದ ಕಾರ್ಯಪಾಲಕ ಅಭಿಯಂತರರು ಹಾಗೂ ಇತರ ಇಂಜಿನಿಯರುಗಳಿರುತ್ತಾರೆ.

ಪ್ರತಿ ತಿಂಗಳ 15ನೇ ತಾರೀಖಿನಂದು ಜಿಲ್ಲಾ ವಿದ್ಯುತ್ ಅದಾಲತ್ ಸಭೆ ಸೇರುತ್ತದೆ. ವಿದ್ಯುತ್ ವಿತರಣೆಗೆ ಸಂಬಂಧಿಸಿದಂತೆ ಗ್ರಾಹಕರು ನೇರವಾಗಿ ಈ ವಿದ್ಯುತ್ ಅದಾಲತ್‌ಗೆ ತಮ್ಮ ಅಹವಾಲು, ದೂರುಗಳನ್ನು ಸಲ್ಲಿಸಬಹುದು.

ಗ್ರಾಹಕರ ದೂರುಗಳ ಕುರಿತು ಅಲ್ಲಿಯೇ ''ವಿದ್ಯುತ್ ಅದಾಲತ್'' ವಿವರವಾಗಿ ಗ್ರಾಹಕರ ಸಮ್ಮುಖದಲ್ಲಿ ಚರ್ಚಿಸಿ ಸಮಸ್ಯೆಗೆ ಪರಿಹಾರ ಸೂಚಿಸುತ್ತದೆ.

ನಿಷ್ಪಕ್ಷಪಾತವಾಗಿ ದೂರುಗಳನ್ನು ಆಲಿಸಿ, ಪರಿಹಾರ ನೀಡುವ ಈ ವಿದ್ಯುತ್ ಅದಾಲತ್‌ಗಳ ಕಾರ್ಯ ನಿರ್ವಹಣೆ ಸಂಪೂರ್ಣ ಪಾರದರ್ಶಕ, ಇವು ನಿರಂತರ ನ್ಯಾಯ ವಿತರಿಸುವ ನ್ಯಾಯಾಲಯಗಳು.

ವಿದ್ಯುತ್ ಅದಾಲತ್‌ಗೆ ದೂರು ಸಲ್ಲಿಸುವ ವಿಧಾನ :

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಎಲ್ಲ ಗ್ರಾಹಕರು ಅಂದರೆ ಎಲ್ಲ ಸಾರ್ವಜನಿಕರೂ ವಿದ್ಯುತ್ ಅದಲಾತ್‌ಗೆ ದೂರು ಸಲ್ಲಿಸಬಹುದು.

ದೂರು ಸಲ್ಲಿಕೆಗೆ ಯಾವುದೇ ಶುಲ್ಕವಿಲ್ಲ, ನಿಗಧಿತ ಫಾರ್ಮುಗಳು, ನಮೂನೆಗಳನ್ನು ತುಂಬಬೇಕಾದ ಜಂಜಾಟವಿಲ್ಲ.

ಒಂದು ಬಿಳಿ ಹಾಳೆಯ ಮೇಲೆ ದೂರುಸಲ್ಲಿಸಿದರೆ ಸಾಕು. ದೂರು ಸಲ್ಲಿಸುವಾಗ.

ಅ. ನಿಮ್ಮ ಗ್ರಾಹಕ ಸಂಖ್ಯೆ (ಕನ್ಸೂಮರ್ ನಂ.)

ಆ. ವಿಳಾಸ. ಟೆಲಿಫೋನ್ ನಂಬರ್ (ಇದ್ದರೆ)

ಇ. ನಿಮಗೆ ಮಂಜೂರಾದ ಹೈಟೆನ್ಷನ್ / ಲೋಟೆನ್ಷನ್ ವಿದ್ಯುತ್ ಪ್ರಮಾಣ,

ಈ. ನೀವು ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದ ಯಾವ ಉಪವಿಭಾಗದ ವ್ಯಾಪ್ತಿಗೆ ಒಳಪಡುವಿರೆಂಬ ವಿವರ,

ಉ. ವಿಭಾಗ:ಜಿಲ್ಲೆ ಮತ್ತು

ಊ. ನಿಮ್ಮ ದೂರಿನ ಸಂಕ್ಷಿಪ್ತ ವಿವರ ಬರೆದರೆ ಸಾಕು,

ನಿಮ್ಮ ದೂರನ್ನು ಜಿಲ್ಲಾಧಿಕಾರಿ ಜಿಲ್ಲಾ ವಿದ್ಯುತ್ ಅದಾಲತ್.......... ಜಿಲ್ಲೆ, ಇವರಿಗೆ ತಲುಪಿಸಬೇಕು. ದೂರುಗಳನ್ನು ಅಂಚೆಯ ಮೂಲಕ ಸಲ್ಲಿಸಬಹುದು. ಇಲ್ಲವೇ ಸ್ವತಃ ನೀಡಬಹುದು. ವಿದ್ಯುತ್ ಅದಾಲತ್‌ನಲ್ಲಿ ಸ್ವೀಕೃತವಾಗುವ ದೂರುಗಳನ್ನು ಕ್ರೋಢೀಕರಿಸಿ. ಅವುಗಳ ವಿವರವಾದ ಅಧ್ಯಯನ ಮಾಡಿ ಜನತೆಯನ್ನು ಕಾಡುವ ನಿರಂತರ ವಿದ್ಯುತ್ ತೊಂದರೆಗಳಿಗೆ ಶಾಶ್ವತ ನಿವಾರೊಪಾಯಗಳನ್ನು ಅರಸುವುದು ಸರ್ಕಾರದ ಆಶಯಗಳಲ್ಲೊಂದು.

- ಕರ್ನಾಟಕ ವಾರ್ತೆ

ಹೋರಾಟದಲ್ಲಿ ಮಹಿಳೆ

- ಹೇಮಲತಾ ಮಹಿಷಿ

ಕಳೆದ ಕೆಲವು ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಮಹಿಳಾ ಸಂಘಟನೆಗಳು ವಿವಿಧರೀತಿಯಲ್ಲಿ ಕ್ರಿಯಾಶೀಲವಾಗಿ ಚಟುವಟಿಕೆಯಲ್ಲಿ ತೊಡಗಿಕೊಂಡಿವೆ. ಈ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಶ್ರೀಮತಿ ಹೇಮಲತಾ ಮಹಿಷಿಯವರು ಈ ಕಾರ್ಯಕ್ರಮಗಳ ವರದಿಯನ್ನು ಇಲ್ಲಿ ಮಂಡಿಸಿದ್ದಾರೆ.

ಇತ್ತೀಚಿನ 3-4 ತಿಂಗಳುಗಳಲ್ಲಿ ಬೆಂಗಳೂರಿನ ಮಹಿಳಾ ಸಂಘ-ಸಂಸ್ಥೆಗಳು ವಿಶೇಷ ಚಟುವಟಿಕೆಯಿಂದ ಕಾರ್ಯಪ್ರವೃತ್ತವಾಗಿವೆ. ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳನ್ನು, ವಿಷಯುಗಳನ್ನು ಕುರಿತು ಚರ್ಚಿಸುತ್ತಿವೆ, ಪ್ರತಿಭಟನಾ ಸಭೆಗಳನ್ನು ನಡೆಸುತ್ತಿವೆ, ಮಹಿಳೆಯರ ಧ್ವನಿಗೆ ಮಹತ್ವ ದೊರಕಬೇಕೆಂದು ಪ್ರಯತ್ನಿಸುತ್ತಿವೆ. ಗುಜರಾತ್ ಹತ್ಯಾಕಾಂಡದಿಂದ ಹಾಗೂ ಪಾರ್ಲಿಮೆಂಟಿನ ಮುಂದೆ ಚರ್ಚೆಗೆ ಬಹಬಹುದೆಂದು ನಿರೀಕ್ಷಿಸಿದ ಎರಡು ಮಸೂದೆಗಳು ಈ ಚಟುವಟಿಕೆಗಳಲ್ಲಿ ಮುಖ್ಯವಾದವು.

ಗುಜರಾತಿನ ಹಿಂಸಾಚಾರದಲ್ಲಿ ಪ್ರಾಣ ಕಳೆದುಕೊಂಡ ಅಲ್ಪಸಂಖ್ಯಾತ ಕೋಮಿನವರಲ್ಲಿ ಮಹಿಳೆಯರೂ ಹಲವಾರು ಜನರಿದ್ದಾರೆ. ಮಾನಕಳೆದು ಕೊಂಡವರು, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರೂ ಹಲವಾರುಜನರಿದ್ದಾರೆ. ಇಂತಹ ಕೌಟುಂಬಿಕ ಅಥವಾ ಸಾಮೂಹಿಕ ಕಲಹ ಅಥವಾ ದೇಶ-ದೇಶಗಳ ಮಧ್ಯದ ಕಲಹಗಳಲ್ಲಿ ಹೆಚ್ಚಾಗಿ ಬಲಿಪಶುಗಳಾಗುವವರು ಅಮಾಯಕ ಮಹಿಳೆಯರು. ದ್ವೇಷದ ದಳ್ಳುರಿಗೆ ಮೊದಲು ಸಿಲುಕಿ ಭಸ್ಮವಾಗುವುದೇ ಮಹಿಳೆಯರು. ಪಾಕಿಸ್ತಾನದ ಸೈನ್ಯ ಸೋತು ಶರಣಾಗುವ ಮೊದಲು ಬಂಗ್ಲಾದೇಶದ ಮಹಿಳೆಯರ ಮೇಲೆ ಪಾಕಿಸ್ತಾನದ ಸೈನಿಕರು ಎಸಗಿದ ದೌರ್ಜನ್ಯ ಎಂದಿಗೂ ಮರೆಯಲಾರದ ಐತಿಹಾಸಿಕ ಸತ್ಯ. ಅದೇ ರೀತಿ, ಗುಜರಾತಿನ ಅಲ್ಪ ಸಂಖ್ಯಾತ ಮಹಿಳೆಯರೂ ದ್ವೇಷಪ್ರೇರಿತ ದೌರ್ಜನ್ಯಕ್ಕೆ ಒಳಗಾದರು. ಅದರಲ್ಲೂ ಒಬ್ಬ ಗರ್ಭಿಣಿ ಮಹಿಳೆಯನ್ನು ಅಟ್ಟಿಸಿಕೊಂಡು ಬಂದು, ಹೊಟ್ಟೆ ಸೀಲಿ ಮಗುವನ್ನು ಕೊಂದು, ಅವಳನ್ನು ಬೆಂಕಿಗೆ ದೂಡಿದ ಕಥೆ ಪತ್ರಿಕೆಗಳಲ್ಲಿ ವರದಿಯಾದಾಗ ಮಹಿಳೆಯರು ಸಿಡಿದೆದ್ದರು. ಆವರೆಗೆ ಗುಜರಾತಿನ ಹತ್ಯಾಕಾಂಡವನ್ನು ಖಂಡಿಸುವ ಅನೇಕ ಸಭೆಗಳು ಪ್ರತ್ಯೇಕವಾಗಿ ನಡೆದಿದ್ದವು. ಆದರೆ, ದಿ. 13.7.2002ರಂದು ಬೆಂಗಳೂರಿನ ಎಲ್ಲಾ ಪ್ರಮುಖ ಮಹಿಳಾ ಸಂಘ ಸಂಸ್ಥೆಗಳು ಪ್ರತಿಭಟನ ಸಭೆ ಸೇರಿ ಗುಜರಾತಿನ ಮಹಿಳೆಯರ ಮೇಲಿನ ಅತ್ಯಾಚಾರವನ್ನು ಖಂಡಿಸಿದವು, ಮುಖ್ಯಮಂತ್ರಿ ನರೇಂದ್ರ ಮೋದಿಯ ಪ್ರತಿ ಕೃತಿಯನ್ನು ದಹನ ಮಾಡಿದರು.

ಪಾರ್ಲಿಮೆಂಟಿನ ತಕ್ಷಣದ ಅಧಿವೇಶನದಲ್ಲಿಯೇ ಕೌಟುಂಬಿಕ ಹಿಂಸೆಯ ತಡೆಗಟ್ಟುವಿಕೆಯ ಮಸೂದೆ ಚರ್ಚೆಗೆ ಬರಬಹುದೆಂದು, ಪಾಸಾಗಬಹುದೆಂದು ನಿರೀಕ್ಷೆ ಇದ್ದುದರಿಂದ ಮೇ ತಿಂಗಳಿನಿಂದಲೇ ಈ ಬಗ್ಗೆ ಮಹಿಳಾ ಸಂಘ-ಸಂಸ್ಥೆಗಳು ಎಚ್ಚರಿಕೆ ವಹಿಸಿದ್ದವು. ರಾಜ್ಯ ಮಹಿಳಾ ಆಯೋಗ ಈ ಮಸೂದೆಯ ಬಗ್ಗೆಯ ಚರ್ಚೆಗಾಗಿ ಒಂದು ಸಭೆ ಕರೆದರೂ ಹೆಚ್ಚಿನ ಮಹಿಳ ಸಂಘ-ಸಂಸ್ಥೆಗಳು ಅಥವಾ ಮಹಿಳಾಪರ ಹೋರಾಟಗಾರರಿಗೆ ಆ ಬಗ್ಗೆ ಮಾಹಿತಿ ಇರಲಿಲ್ಲವಾದ್ದರಿಂದ ಆ ನಂತರ ಈ ಮಸೂದೆಯ ಬಗ್ಗೆ ಹಲವಾರು ಬೇರೆ-ಬೇರೆ ಸಭೆಗಳಾದವು, ಚರ್ಚೆಗಳು ನಡೆದವು, ಈ ಮಸೂದೆಯ ಬಗ್ಗೆ ವ್ಯಾಪಕ ತಿಳುವಳಿಕೆ ನೀಡಲು, ಆ ಮೂಲಕ ಮಹಿಳೆಯರು ಧ್ವನಿ ಎತ್ತುವಂತೆ ಮಾಡಲು ಪ್ರಯತ್ನಿಸಲಾಯಿತು. ಬಹುಶಃ ಇತ್ತೀಚಿನ ದಿನಗಳಲ್ಲಿ ಮತ್ತಾವುದೇ ಮಸೂದೆಯ ಬಗ್ಗೆ ಮಹಿಳೆಯರು ಆಸಕ್ತಿ ವಹಿಸಿ ಚರ್ಚಿಸಬೇಕು, ತಮ್ಮ ಸಲಹೆ ನೀಡಬೇಕು, ಬದಲಾವಣೆಯಾಗಬೇಕಿದ್ದಲ್ಲಿ ಅದನ್ನು ವ್ಯಕ್ತಪಡಿಸಬೇಕು ಎನ್ನುವುದು ಕೇವಲ ಒಂದು ವಿಚಾರ ಮಟ್ಟದಲ್ಲೇ ಉಳಿಯದೇ ಕಾರ್ಯ ಮಟ್ಟಕ್ಕೆ ಬಂದುದು ಒಂದು ಆರೋಗ್ಯಕರ ಬೆಳವಣಿಗೆ. ಜನವಾದಿ ಮಹಿಳಾ ಸಂಘವು ನಡೆಸಿದ ಸಭೆಯಲ್ಲಿ ಭಾಗವಹಿಸಿದ ಶ್ರೀಮತಿ ಬೃಂದಾಕಾರತ್‌ರವರು ಗುಜರಾತ್ ಹತ್ಯಾಕಾಂಡದ ಬಗ್ಗೆಯ ತಮ್ಮ ಗುಜರಾತ್ ಭೇಟಿಯ ಅನುಭವಗಳನ್ನು ತಿಳಿಸಿದ್ದಲ್ಲದೇ ಈ ಕೌಟುಂಬಿಕ ಹಿಂಸೆಯ ಮಸೂದೆಯ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದರು. ಮುಂದಿನ ವಾರದಲ್ಲಿ ಎಂದರೆ ಮೇ 23ರಂದು ವೈ ಡಬ್ಲ್ಯೂ.ಸಿ.ಎ. ಸದಸ್ಯರು ಈ ಬಗ್ಗೆ ಚರ್ಚಿಸಿದರು. ದಿನಾಂಕ 25ನೇ ಜೂನ್‌ನಂದು ಆಕ್ಷನ್‌ಏಡ್ ಇಂಡಿಯಾ ಮತ್ತು ಸುಮಂಗಲಿ ಸೇವಾಶ್ರಮ, ಕೌಟುಂಬಿಕ ಶೋಷಣೆಯ ಕಾಯಿದೆಯ ಬಗ್ಗೆ ಪರಮರ್ಶೆಮಾಡಲು ದಕ್ಷಿಣಭಾರತ ಮಟ್ಟದ ಒಂದು ದಿನದ ಸಮಾವೇಶವನ್ನು ಹಮ್ಮಿಕೊಂಡಿತ್ತು. ಶ್ರೀಮತಿಯರಾದ ಮೋಟಮ್ಮ, ಇಂದಿರ ಜಯಸಿಂಗ್, ಬಿಂಬಾರಾಯಕರ್, ಲೀಲಾದೇವಿ ಆರ್. ಪ್ರಸಾದ್, ಫಿಲೋಮಿನಾ ಫೆರಸ್ (ಅಧ್ಯಕ್ಷರು, ರಾಜ್ಯ ಮಹಿಳಾ ಆಯೋಗ), ಗೌರಮ್ಮ ಸಿದ್ಧಾರೆಡ್ಡಿ (ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಕ್ರಿಯಾ ಯೋಜನೆ ಸಮಿತಿ), ಹೇಮಲತಾ ಮಹಿಸಿ, ಡಾ. ಸರೋಜಾ, ಕಮಲಮ್ಮ (ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ) ಭಾಗವಹಿಸಿದ್ದರು.

ಶ್ರೀಮತಿ ಇಂದಿರಾ ಜಯಸಿಂಗ್‌ರವರು ದೆಹಲಿಯ ಸರ್ವೋಚ್ಚ ನ್ಯಾಯಾಲಯದ ವಕೀಲರಲ್ಲದೇ ಲಾಯರ್ಸ್ ಕಲೆಕ್ಟಿವ್ ಸಂಸ್ಥೆಯ ನಿರ್ದೇಶಕರೂ ಆಗಿದ್ದು, ಈಗ್ಗೆ ಎರಡು ವರ್ಷಗಳಿಂದ ಕೌಟುಂಬಿಕ ಹಿಂಸೆಯ ವಿರುದ್ಧ ಕಾನೂನು ತರಲು ಪ್ರಯತ್ನಿಸುತ್ತಿದ್ದಾರೆ. ಲಾಯರ್ಸ್ ಕಲೆಕ್ಟಿವ್ ಮೂಲಕ ಒಂದು ವಿವರವಾದ ಮಸೂದೆಯನ್ನೂ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಆದರೆ ಕೇಂದ್ರ ಸರ್ಕಾರ ತನ್ನದೇ ಆದ ಪ್ರಸ್ತುತ ಮಸೂದೆಯನ್ನು ಸಿದ್ಧಪಡಿಸಿ ಪಾರ್ಲಿಮೆಂಟಿನ ಮುಂದೆ ತಂದಿದೆ. ದೆಹಲಿಯ ಮಹಿಳಾ ಸಂಸ್ಥೆಗಳು ಈ ಮಸೂದೆ ದೋಷ ಪೂರಿತವಾಗಿರುವುದಾಗಿ ಪ್ರತಿಭಟಿಸಿದ್ದರಿಂದ ಅದನ್ನು

ಪಾರ್ಲಿಮೆಂಟಿನ ಸೆಲೆಕ್ಟ್ ಕಮಿಟಿಗೆ ಒಪ್ಪಿಸಿದೆ. ಈ ಸೆಲೆಕ್ಟ್ ಕಮಿಟಿಯು ದೇಶದಾದ್ಯಂತ ಮಹಿಳಾ ಸಂಘ-ಸಂಸ್ಥೆಗಳ, ವ್ಯಕ್ತಿಗಳ ಅಭಿಪ್ರಾಯಗಳನ್ನು, ಆಕ್ಷೇಪಣೆಗಳನ್ನು ಪರಿಶೀಲಿಸಿ, ತನ್ನ ವರದಿ ಸಲ್ಲಿಸಲು ತಿಳಿಸಲಾಗಿದೆ. ಹಾಗಾಗಿಯೇ ಮಹಿಳೆಯರು ಈ ಬಗ್ಗೆ ಎಚ್ಚರ ವಹಿಸಿ, ತಮ್ಮ ಆಕ್ಷೇಪಣೆಗಳನ್ನು ಸಮಯದೊಳಗೆ ಸಲ್ಲಿಸಲು ಇಂತಹ ಹಲವಾರು ಸಭೆಗಳನ್ನು ಬೆಂಗಳೂರಿನಲ್ಲಿ ನಡೆಸಲಾಯಿತು.

ಇಂದಿರಾ ಜಯಸಿಂಗ್ ಬೃಂದಾಕಾರತ್‌ರವರು ಈ ಮಸೂದೆ ಇರುವ ರೀತಿಯಲ್ಲಿ ಪೂರ್ಣವಾಗಿ ವಿರೋಧಿಸುತ್ತಾರೆ. ಮತ್ತಿತರು ತಿದ್ದುಪಡಿಗಳೊಂದಿಗೆ ಒಪ್ಪಿಕೊಳ್ಳಬೇಕೆಂದು ಬಯಸುತ್ತಾರೆ. ಈ ಸಭೆಯಲ್ಲಿ, ಮಹಿಳೆಯರಿಂದಲೂ ಪುರುಷರ ಮೇಲೆ ದೌರ್ಜನ್ಯವಾಗುತ್ತಿರುವುದರಿಂದ ಅದನ್ನೂ ಇದರಲ್ಲಿ ಸೇರಿಸಿಕೊಳ್ಳಬೇಕೆಂದು ರಾಜ್ಯಸಭಾಸದಸ್ಯೆ ಶ್ರೀಮತಿ ಬಿಂಬಾರಾಯಕರ್ ಪ್ರತಿಪಾದಿಸಿದ್ದುದು ವಿಚಿತ್ರವಾಗಿತ್ತು. ಏಕೆಂದರೆ ಅವರು ಪಾರ್ಲಿಮೆಂಟಿನ ಮಹಿಳಾ ಸಶಕ್ತೀಕರಣ ಸಮಿತಿಯ ಒಬ್ಬ ಸದಸ್ಯೆ! ಈ ಸಭೆಯ ನಂತರ ಮಹಿಳಾ ಸಾಂಸ್ಕೃತಿಕ ಸಂಘಟನೆ, ಮಹಿಳಾ ವಕೀಲರ ಸಂಘದಲ್ಲಿಯೂ ಈ ಮಸೂದೆಯ ಬಗ್ಗೆ ಚರ್ಚೆನಡೆಯಿತು.

ಈ ಮಸೂದೆಯ ಬಗ್ಗೆ ಮುಖ್ಯವಾದ ಆಕ್ಷೇಪಣೆಗಳು ಕೆಳಕಂಡಂತಿವೆ :

1. 'ಕೌಟುಂಬಿಕ ಹಿಂಸೆ'ಯ ವ್ಯಾಖ್ಯೆಯನ್ನು ಸರಿಯಾಗಿ ಮಾಡಿಲ್ಲ. ಏಕೆಂದರೆ ಈ ಮಸೂದೆಯ ಪ್ರಕಾರ 'ಹಿಂಸೆ' ಎನಿಸಬೇಕಾದರೆ ಅದು ಆಗಬೇಕು.

2. ಹಿಂಸೆ ಮಾಡಿದ ಪುರುಷನಿಗೆ ತನ್ನ ಅಥವಾ ಬೇರೆಯವರಿಗೆ ಸೇರಿದ ಸ್ವತ್ತನ್ನು ರಕ್ಷಣೆ ಮಾಡಿಕೊಳ್ಳಲು ಹಿಂಸಿಸುವ ಅಧಿಕಾರ ಕೊಟ್ಟಿದೆ.

3. ಗಂಡನ ಮನೆಯಲ್ಲಿ ವಾಸಿಸುವ ಮಹಿಳೆಯರ ಹಕ್ಕನ್ನು ಈ ಕಾನೂನ ಒಳಗೊಂಡಿಲ್ಲ. ಅದಿಲ್ಲದೇ ಮಹಿಳೆಗೆ ಹಿಂಸೆಯಿಂದ ರಕ್ಷಣೆ ನೀಡುವುದಕ್ಕೆ ಅರ್ಥವಿಲ್ಲ.

4. ಇದರಲ್ಲಿರುವ ಪ್ರೊಟೆಕ್ಷನ್ ಆಫೀಸರ್ ಸರ್ಕಾರಿ ಅಧಿಕಾರಿಯಂತೆ ವರ್ತಿಸುವ ಅಪಾಯವಿರುವುದರಿಂದ ಮಹಿಳೆಯರು ದೂರನ್ನು ನೀಡಿದರೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ, ಆದ್ದರಿಂದ, ಪ್ರೊಟೆಕ್ಷನ್ ಆಫೀಸರ್ಸ್ ಬದಲು ಮಹಿಳಾ ಪ್ರತಿನಿಧಿಗಳನ್ನು ಒಳಗೊಂಡ ಸ್ಥಳೀಯ ಸಮಿತಿಗಳನ್ನು ನೇಮಿಸಬೇಕು.

5. ದೂರಿನ ವಿಚಾರಣೆಯ ಅಧಿಕಾರವನ್ನು ಮ್ಯಾಜಿಸ್ಟ್ರೇಟ್ ಕೋರ್ಟುಗಳಿಗೆ ಕೊಡುವ ಬದಲು ಕೌಟುಂಬಿಕ ನ್ಯಾಯಾಲಯಗಳಿಗೆ, ಸಿವಿಲ್ ನ್ಯಾಯಾಲಯಗಳಿಗೆ ಕೊಡಬೇಕು.

6. ರಕ್ಷಣೆಯ ಆದೇಶಕ್ಕೆ ಅವಧಿ ಸೀಮಿತಗೊಳಿಸಬೇಕಾದ ಅಗತ್ಯವಿಲ್ಲ.

ಈ ಮಸೂದೆಯನ್ನು, ಮಹಿಳೆಯರಿಗೆ ಕೌಟುಂಬಿಕ ಹಿಂಸೆಯ ವಿರುದ್ಧ ರಕ್ಷಣೆಕೊಡುವುದಕ್ಕಾಗಿ ಅಲ್ಲದೇ ಕುಟುಂಬವನ್ನು ಉಳಿಸಲು ಮಾಡುತ್ತಿರುವುದಾಗಿ ಮಸೂದೆಯ ಉದ್ದೇಶ್ಯದಲ್ಲಿ ತಿಳಿಸಿರುವುದು ಹಲವರ ಆಕ್ಷೇಪಣೆಗೆ ಗುರಿಯಾಗಿದೆ. ಕುಟುಂಬ ಉಳಿಸುವ ಉದ್ದೇಶ್ಯವನ್ನು ಈ ಮಸೂದೆಗೆ ಆರೋಪಿಸಿದರೆ ನೊಂದ ಮಹಿಳೆಗೆ ನ್ಯಾಯ ಸಿಗುವುದಿಲ್ಲ, ಪುನಃ ಆ ಹಿಂಸೆಯ ವಾತಾವರಣಕ್ಕೇ ಹಿಂತಿರುಗಿ, ಕುಟುಂಬವನ್ನು ಉಳಿಸುವಂತೆ ಅವಳ ಮೇಲೆಯೇ ಒತ್ತಡ ಹೇರಲಾಗುವುದು ಎಂದು ಆಕ್ಷೇಪಣಾಕಾರರು ಹೇಳುತ್ತಾರೆ. ಹಿಂಸೆಯನ್ನು ಆಧರಿಸಿದ ಆ ನಿರ್ದಿಷ್ಟ ಕೌಟುಂಬಿಕ ಸಂಬಂಧ ಉಳಿಯಬೇಕೇ, ಬೇಡವೇ ಎಂಬುದನ್ನು ನಿರ್ಧರಿಸುವುದು ಸರ್ಕಾರದ ಅಥವಾ ಮೂರನೆಯವರ ಆಯ್ಕೆಯಲ್ಲ, ಅದಕ್ಕೆ ಒಳಗಾದ ವ್ಯಕ್ತಿಗಳ ಆಯ್ಕೆಗೆ ಬಿಡಬೇಕಾಗುತ್ತದೆ. ಆದರೆ, ಕುಟುಂಬ ವ್ಯವಸ್ಥೆಯನ್ನು ಉಳಿಸುವ ಸಲುವಾಗಿ ಇಂತಹ ಪ್ರಕರಣಗಳಲ್ಲಿ ರಾಜಸಂಧಾನಕ್ಕೆ ಹೆಚ್ಚು ಒತ್ತುಕೊಡುವುದರಲ್ಲಿ ತಪ್ಪು ಕಾಣುವುದು ಸಲ್ಲದು. ಇಂದಿಗೂ ಹೆಚ್ಚಿನ ಮಹಿಳೆಯರು ರಾಜಿಯನ್ನು ಬಯಸುತ್ತಾರೆ. ಆದರೆ, ಅದೇ ಸಮಯಕ್ಕೆ ಹಿಂಸೆಯಿಂದ ಮುಕ್ತಿಯನ್ನೂ ಬಯಸುತ್ತಾರೆ. ಕುಟುಂಬವೆಂದರೆ ಗಂಡ-ಹೆಂಡತಿ ಸಂಬಂಧ ಮಾತ್ರವಲ್ಲ, ತಂದೆ-ತಾಯಿ-ಮಕ್ಕಳ ಸಂಬಂಧ, ಸೋದರ - ಸೋದರಿಯರ ನಡುವಿನ ಸಂಬಂಧವನ್ನೂ ಒಳಗೊಂಡಿದೆ, ಅಂತಹ ಸಂಬಂಧಗಳ ನಡುವಿನ ಹಿಂಸೆಗೂ ಈ ಮಸೂದೆ ಅನ್ವಯಿಸುತ್ತದೆ ಎಂಬುದನ್ನು ಮರೆಯಲಾಗದು. ಅಲ್ಲದೇ, ಯಾವ ಸ್ತ್ರೀಪರವಾದರೂ ಈವರೆಗೆ ಕುಟುಂಬಕ್ಕೆ ಬದಲಿ ವ್ಯವಸ್ಥೆಯನ್ನು ಸೂಚಿಸಿಲ್ಲ. ಒಟ್ಟಾರೆಯಾಗಿ, ಮಹಿಳೆಯರು ಸಕಾಲದಲ್ಲಿ ಸೆಲೆಕ್ಟ್ ಕಮಿಟಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಸಮಿತಿ ಬೇರೆ - ಬೇರೆ ರಾಜ್ಯಗಳಿಗೆ ಹೋಗಿ ಅಭಿಪ್ರಾಯ ಸಂಗ್ರಹಿಸುವ ಸಾಧ್ಯತೆ ಇದೆ. ಸಧ್ಯಕ್ಕಂತೂ ಆತುರಾತುರವಾಗಿ ಹಸಿ-ಬಿಸಿ ಕಾನೂನು ಮಾಡುವ ಸಂದರ್ಭ ತಪ್ಪಿದೆ. ಈ ವರ್ಷದ ಕೊನೆಯಲ್ಲಿ ವಿಶ್ವ ಸಂಸ್ಥೆಗೆ ಸರ್ಕಾರ ಈ ಬಗ್ಗೆ ಬರದಿ ಸಲ್ಲಿಸಬೇಕಾಗಿರುವುದರಿಂದ ಈ ಆತುರ ಎಂಬ ಊಹೆಗೆ ಆಧಾರವಿದೆ.

ಪಾರ್ಲಿಮೆಂಟಿನ ಮುಂದೆ ಬರಬಹುದಾಗಿದ್ದ ಮತ್ತೊಂದು ಮಸೂದೆ ಭ್ರೂಣಲಿಂಗ ಪತ್ತೆಗೆ ಸಂಬಂಧಿಸಿದೆ. 1994ರಲ್ಲಿಯೇ ಇದನ್ನು ನಿಷೇಧಿಸುವ ಕಾನೂನು ಜಾರಿಯಲ್ಲಿದ್ದರೂ ಹೆಣ್ಣು ಭ್ರೂಣಹತ್ಯೆ ಅವ್ಯಾಹತವಾಗಿ ನಡೆಯುತ್ತಿದೆ. ಜೊತೆಗೆ ಗರ್ಭಧರಿಸುವ ಮೊದಲೇ ಮಗುವಿನ ಲಿಂಗವನ್ನು ಆಯ್ಕೆಮಾಡಿಕೊಳ್ಳುವುದನ್ನು ವಿಜ್ಞಾನ ಸಾಧ್ಯವಾಗಿಸಿದೆ. ಹಾಗಾಗಿ ಈ ಕಾನೂನನ್ನು ತಿದ್ದುಪಡಿಮಾಡುವ, ಬಲಗೊಳಿಸುವ ಅವಶ್ಯಕತೆ ಇದೆ. ಈ ಬಗ್ಗೆ ವಿಮೋಚನಾ ಮಹಿಳಾ ಸಂಸ್ಥೆಯು ಜೂನ್ ತಿಂಗಳಿನಲ್ಲಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಸುಪ್ರೀಂಕೋರ್ಟಿನಲ್ಲಿ ಈ ಬಗ್ಗೆ ರಿಟ್ ಹಾಕಿರುವ ಶ್ರೀ ಬಾಬು, ಶ್ರೀಮತಿ ಮಾರ್ಗರೆಟ್ ಆಳ್ವ ಮತ್ತಿತರರು ಭಾಗವಹಿಸಿದ್ದ ಈ ವಿಚಾರ ಸಂಕಿರಣ ಈ ಸಮಸ್ಯೆ ಎಷ್ಟು ಜಟಿಲವಾಗಿದೆ, ತೀವ್ರವಾಗಿದೆ ಎಂಬುದನ್ನು ಮನದಟ್ಟು ಮಾಡಿತು. ಪಂಜಾಬ್‌ನಲ್ಲಿ 0-6 ವಯಸ್ಸಿನ 1000 ಗಂಡುಮಕ್ಕಳಿಗೆ ಕೇವಲ 739 ಹೆಣ್ಣುಮಕ್ಕಳಿದ್ದಾರೆನ್ನುವುದು ಆತಂಕಕಾರಿ ವಿಷಯ. ಪಂಜಾಬ್, ಹಿರಿಯಾನಾ, ಹಿಮಾಚಲ ಪ್ರದೇಶ, ರಾಜಾಸ್ಥಾನ, ಗುಜರಾತ್, ಮಹಾರಾಷ್ಟ್ರದಲ್ಲಿ ಈ

ವಯಸ್ಸಿನ ಹೆಣ್ಣು ಮಕ್ಕಳ ಸಂಖ್ಯೆ ಗಣನೀಯವಾಗಿ ಇಳಿದಿದೆ ಹಾಗೂ ಇದಕ್ಕೂ, ಅಲ್ಲಿರುವ ಭ್ರೂಣ ತಪಾಸಣೆಯ ಕ್ಲಿನಿಕ್‌ಗಳ ಸಂಖ್ಯೆಯೂ ನೇರವಾಗಿ ಸಂಬಂಧವಿದೆ. ಗರ್ಭಧರಿಸುವ ಮೊದಲೇ ಹುಟ್ಟುವ ಮಗುವಿನ ಲಿಂಗವನ್ನು ಆಯ್ಕೆ ಮಾಡಿಕೊಳ್ಳುವ ಸಾಧ್ಯತೆಯಂತೂ ಹೆಣ್ಣು ಮಕ್ಕಳಿಗೆ ಮತ್ತಷ್ಟು ಮಾರಕವಾಗಲಿದೆ. ಮುಂದಿನ ವರ್ಷಗಳಲ್ಲಿ ಹೆಚ್ಚಲಿರುವ ಮಹಿಳೆಯರ ಮೇಲಿನ ಅತ್ಯಾಚಾರ ದೌರ್ಜನ್ಯಕ್ಕೆ ಇದು ನೇರವಾಗಿ ಕಾರಣವಾಗಲಿದೆ. ಆದ್ದರಿಂದ, ಕಾನೂನನ್ನು ತಿದ್ದುಪಡಿಗೊಳಿಸಬೇಕಾದ, ಬಿಗಿಗೊಳಿಸಬೇಕಾದ ತುರ್ತು ಅಗತ್ಯವಿದೆ. ಇಂತಹ ವೈಜ್ಞಾನಿಕ ತಾಂತ್ರಿಕ ಕ್ರಮಗಳ ಮೇಲೆ ಬಿಗಿಯಾದ ಹಿಡಿತವಿಡಬೇಕಾಗಿದೆ.

ಜುಲೈ **29**ರಂದು ಬೆಂಗಳೂರಿನಲ್ಲಿ ಮಹಿಳೆಯರ ಮತ್ತೊಂದು ಬೃಹತ್ ಸಮಾವೇಶ ನಡೆಯಿತು. ಮಹಿಳೆಯರ ರಾಷ್ಟ್ರೀಯ ಒಕ್ಕೂಟ (NAWO) ಏರ್ಪಡಿಸಿದ್ದ ಈ ಸಮಾವೇಶದಲ್ಲಿ ದಕ್ಷಿಣದ ನಾಲ್ಕು ರಾಜ್ಯಗಳ ಮಹಿಳಾ ಪ್ರತಿನಿಧಿಗಳು ಭಾಗವಹಿಸಿ, ಮಹಿಳಾ ಚಳುವಳಿಯ ಮುಂದಿನ ಸವಾಲುಗಳ ಬಗ್ಗೆ ಚರ್ಚಿಸಿದರು. ಕರ್ನಾಟಕ ರಾಜ್ಯ ಯೋಜನಾ ಮಂಡಳಿಯ ಮಾಜಿ ಸದಸ್ಯೆ ಡಾ|| ದೇವಕಿ ಜೈನ್, ಉರ್ದು ಲೇಖಕಿ ಪದ್ಮಶ್ರೀ ಜಿಲಾನಿ ಬಾನುರಾದ, ಮುಖ್ಯ ಕಾರ್ಯದರ್ಶಿ ಡಾ|| ಶೋಭಾ ನಂಬಿಸನ್, ನವೋ ಅಧ್ಯಕ್ಷೆ ವಸಂತ ಕನ್ನಬೀರನ್, ತಮಿಳುನಾಡು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ|| ವಸಂತಿದೇವಿ, ಸಾಮಾಜಿಕ ವಿಜ್ಞಾನಿ ಡಾ|| ಶೋಭಾ ರಘುರಾಂ, ತುಮಕೂರಿನ ಕಾರ್ಯಕರ್ತೆ ಜ್ಯೋತಿರಾಜ್ ಭಾಗವಹಿಸಿದ್ದರು. ಮಹಿಳೆಯರ ಮೇಲಿನ ದೌರ್ಜನ್ಯ, ಜಾಗತೀಕರಣ ಮಹಿಳೆಯ ಮೇಲೆ ಪರಿಣಾಮ ಮತ್ತು ದಲಿತ ಮಹಿಳೆಯರ ಮುಂದಿರುವ ಸವಾಲುಗಳು, ಸಂಘರ್ಷಗಳು ಈ ವಿಷಯಗಳ ಬಗ್ಗೆ ನಡೆದ ಸಭೆಗೆ ಕರ್ನಾಟಕ ಅಲ್ಪಸಂಖ್ಯಾತ ವರ್ಗದ ಆಯೋಗದ ಮಾಜಿ ಸದಸ್ಯೆ ಶ್ರೀಮತಿ ಹಸನತ್ ಮನ್ಸೂರ್ ಹಾಗೂ ಶ್ರೀಮತಿ ಹೇಮಲತಾ ಮಹಿಷಿ ಜಂಟಿ ಅಧ್ಯಕ್ಷತೆ ವಹಿಸಿದ್ದರು.

ಸಭೆಯಿಂದ ಸಭೆಗೆ, ವಿಷಯದಿಂದ ವಿಷಯಕ್ಕೆ ಧಾವಿಸುತ್ತಿರುವಾಗಲೇ ಮಧ್ಯಪ್ರದೇಶದ 'ಸತಿ' ಪ್ರಕರಣದ ಸುದ್ದಿ ಬಂದಿದೆ. ರಾಷ್ಟ್ರೀಯ ಮಹಿಳಾ ಆಯೋಗ ಕ್ರಿಯಾಶೀಲವಾಗಿ ಸ್ಥಳಕ್ಕೆ ಭೇಟಿ ನೀಡಿದೆ. ಮೊದಲೇ ಈ ಬಗ್ಗೆ ಗೊತ್ತಿದ್ದು ತಡೆಯಲು ಯಾರೂ ಪ್ರಯತ್ನಿಸದ ಸುದ್ದಿ ಆಘಾತಕಾರಿಯಾಗಿದೆ. ಚಿತೆಗೆ ತಳ್ಳುವುದು ಮಾತ್ರ ಅಪರಾಧವೇ, ಗೊತ್ತಿದ್ದೂ ತಡೆಯಲು ಯತ್ನಿಸದಿರುವುದೂ ಅಪರಾಧವಾಗುವುದಿಲ್ಲವೇ? ಎಂಬಂತಹ ವಿಚಾರಗಳು ನಮ್ಮನ್ನು ಕಾಡುತ್ತವೆ. ಬೆಂಗಳೂರಿನ ಮಹಿಳಾ ಸಂಘಟನೆಗಳು ಸಂಯುಕ್ತವಾಗಿ ಮಧ್ಯಪ್ರದೇಶ ಮುಖ್ಯಮಂತ್ರಿಗೆ ಪತ್ರ ಬರೆದು 'ಸತಿ'ಗೆ ಕಾರಣರಾದ ಎಲ್ಲರನ್ನೂ ಶಿಕ್ಷಿಸಬೇಕೆಂದು ಕೇಳಿಕೊಂಡಿವೆ. ಅಷ್ಟೇ ಅಲ್ಲ 'ಸತಿ'ಯ ವೈಭವೀಕರಣವೂ ಯಾವುದೇ ರೀತಿಯಲ್ಲಿ ನಡೆಯದಂತೆ ನಿಗಾ ವಹಿಸಬೇಕೆಂದು ಒತ್ತಾಯಿಸಿವೆ. ಎಲ್ಲಕ್ಕಿಂತ ಮುಖ್ಯವಾಗಿ ಕಾನೂನು ಬಾಹಿರವಾದ ಮತ್ತು ಅಮಾನುಷ ಆಚರಣೆಯಾದ ಸತಿ ಪದ್ಧತಿಯ ನಿರ್ಮೂಲನಕ್ಕೆ ಜನಜಾಗೃತಿ ಕಾರ್ಯಕ್ರಮಗಳ ಅಗತ್ಯವನ್ನೂ ಒತ್ತಾಯಿಸಿವೆ.

RNI No. 45577/88

"Achala" 108, Skyline Surabhi,
14 - P, Vidyapeeta Road,
BSK III Stage,
Bangalore - 560 085

To :

Smt/Sri

CPMG/KA/BG-8/2002
Book-Post/News Letter